# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

## ದಿ: 05-09-2022 ರ ಪ್ರಾಧಿಕಾರದ ಪ್ರಥಮ ಸಭೆಯ ನಡವಳಿ

ಅಧ್ಯಕ್ಷರು : ಮಾನ್ಯ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಹಾಜರಿ : ಹಾಜರಿ ಪುಸ್ತಕದಲ್ಲಿ ಸಹಿ ಮಾಡಿದ ಸದಸ್ಯರುಗಳು

*****

ಪ್ರಾರಂಭದಲ್ಲಿ ಪ್ರಾಧಿಕಾರದ ಆಯುಕ್ತರು, ಮಾನ್ಯ ಅಧ್ಯಕ್ಷರನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಮಾನ್ಯ ಶಾಸಕರು, ಮೂಡಬಿದ್ರೆ ಕ್ಷೇತ್ರ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಮತ್ತು ಸರಕಾರದಿಂದ ನಾಮನಿರ್ದೇಶನಗೊಂಡ ಸದಸ್ಯರುಗಳನ್ನು ಪ್ರಾಧಿಕಾರದ ಪ್ರಥಮ ಸಭೆಗೆ ಸ್ವಾಗತಿಸಿದರು. ಹಿಂದೆ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಪ್ರಾರಂಭವಾದಂದಿನಿಂದ ಈಗ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವಾಗಿ ರೂಪುಗೊಂಡವರೆಗೆ ನಡೆದು ಬಂದ ಬಗ್ಗೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು. ತದನಂತರ ಸಭೆಯನ್ನು ನಡೆಸಿಕೊಡಲು ಅಧ್ಯಕ್ಷರನ್ನು ಕೋರಿದರು. ನಂತರ ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

**ವಿಷಯ ಸಂಖ್ಯೆ 1: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018ರ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 08 ಶಾಸನ 2018, ದಿ:09-03-2018 ಕರ್ನಾಟಕ ವಿಶೇಷ ರಾಜ್ಯಪತ್ರಿಕೆಯಲ್ಲಿ ದಿ:09-03-2018ರಂದು ಅಧೀಕೃತವಾಗಿ ಪ್ರಕಟಗೊಂಡಿದೆ. ಈ ಅಧಿನಿಯಮದ ಕಲಂ 10 ಮತ್ತು 11 ರ ನಿಜ ಪ್ರತಿಯನ್ನು ಈ ಕೆಳಗಿನಂತೆ ಆವಗಾಹನೆಗಾಗಿ ಒಪ್ಪಿಸಿದೆ.**

**10. ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.-**

(1) ಪ್ರಾಧಿಕಾರವು, ಅಧಿನಿಯಮದ ಇತರ ಪ್ರಾಧಿಕಾರಗಳು ನಿರ್ವಹಿಸಬೇಕೆಂದು ನಿರ್ದಿಷ್ಟವಾಗಿ ಹೇಳಲಾದ ಅಂಥ ಕ್ರಮಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಉದ್ದೇಶ ಮತ್ತು ಉಪಬಂಧಗಳನ್ನು ಮಾಡುವುದಕ್ಕೆ ಅಥವಾ ಜಾರಿಗೊಳಿಸುವುದಕ್ಕೆ ಅವಶ್ಯವೆಂದು ತಾನು ಭಾವಿಸುವ ಯಾವುದನ್ನಾದರೂ ಮಾಡುವ ಅಧಿಕಾರವನ್ನು ಸಾಮಾನ್ಯವಾಗಿ ಹೊಂದಿರತಕ್ಕದ್ದು.

(2) ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೊಳಪಟ್ಟು, ಪ್ರಾಧಿಕಾರದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು, ಎಂದರೆ:-

(i) ಪ್ರಾಧಿಕಾರದ ಎಲ್ಲಾ ವ್ಯವಹಾರಗಳು, ನಿಧಿ ಮತ್ತು ಸ್ವತ್ತುಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ವಹಿಸುವುದು;

(ii) ಸರ್ಕಾರದ ಅನುಮೋದನೆಯೊಂದಿಗೆ ಖಾಯಂ ಅಥವಾ ತಾತ್ಕಾಲಿಕ ಆಧಾರದ ಮೇಲೆ ಪ್ರಾಧಿಕಾರದಲ್ಲಿನ ವಿವಿಧ ವೃಂದಗಳ ಎಲ್ಲಾ ಹುದ್ದೆಗಳನ್ನು ಮಂಜೂರು ಮಾಡುವುದು;

(iii) ಪ್ರಾಧಿಕಾರದ ಸಮಿತಿಗಳ ಅಥವಾ ಉಪ ಸಮಿತಿಗಳ ಚೇರ್‌ಮನ್‌ರವರು ಮತ್ತು ಸದಸ್ಯರನ್ನು ನೇಮಕ ಮಾಡುವುದು;

(iv) ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ12) ಅನುಸಾರವಾಗಿ ಪ್ರಾಧಿಕಾರಕ್ಕಾಗಿ ಟೆಂಡರುಗಳನ್ನು ಕರೆಯುವ ಅಥವಾ ತೆಗೆದುಕೊಳ್ಳಬೇಕಾದ ಸೇವೆಗಳಿಗಾಗಿ ನಿಯಮಿಸಬಹುದಾದ ಅಂಥ ಮಿತಿಯೊಳಗೆ ಎಲ್ಲಾ ಕಾಮಗಾರಿಗಳಿಗಾಗಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವುದು;

(v) ಪ್ರಾಧಿಕಾರದ ಉದ್ದೇಶಗಳಿಗೆ ಮತ್ತು ಈ ಅಧಿನಿಯಮದ ಹಾಗೂ ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂತೆ, ಸ್ಥಿರ ಮತ್ತು ಚರ ಸ್ವತ್ತುಗಳು ಅಥವಾ ಯಾವುದೇ ಹಾಜರುಪಡಿಸಲಾದ ಹೊಣೆಗಾರಿಕೆಗಳು ಮತ್ತು ವ್ಯವಸ್ಥೆಗಳೊಂದಿಗೆ ಇತರ ನಿಧಿಗಳು, ಸರ್ಕಾರ ಮತ್ತು ಇತರ ಸಾರ್ವಜನಿಕ ನಿಕಾಯಗಳು ಅಥವಾ ಖಾಸಗಿ ವ್ಯಕ್ತಿಗಳಿಂದ ಯಾರಿಂದಲಾದರೂ ಖರೀದಿ, ದಾನ, ವಿನಿಮಯ, ಗುತ್ತಿಗೆ, ಬಾಡಿಗೆ ಅಥವಾ ಅನ್ಯಥಾ ಮೂಲಕ ಭೂಮಿಯನ್ನು ಅರ್ಜಿಸುವುದು.

(vi) ಪ್ರಾಧಿಕಾರದ ಪರವಾಗಿ ಒಪ್ಪಂದಗಳು, ಕರಾರುಗಳು ಮತ್ತು ದಸ್ತಾವೇಜುಗಳನ್ನು ಸಮಾಲೋಚಿಸುವುದು, ಮಾಡುವುದು ಮತ್ತು ಕಾರ್ಯಗತಗೊಳಿಸುವುದು ಹಾಗೂ ಅಂಥ ಒಪ್ಪಂದಗಳು, ಕರಾರುಗಳು ಮತ್ತು ದಸ್ತಾವೇಜುಗಳನ್ನು ವ್ಯತ್ಯಾಸಗೊಳಿಸುವುದು ಹಾಗೂ ಹಿಂಪಡೆಯುವುದು;

(vii) ಪ್ರಾಧಿಕಾರದ ಬಾಂಡುಗಳು, ಡಿಬೆಂಚರುಗಳು ಅಥವಾ ಇತರ ಹೊಣೆಗಾರಿಕೆಗಳು ಅಥವಾ ಭದ್ರತೆಗಳ ಮೇಲೆ ಅಥವಾ ಪ್ರಾಧಿಕಾರದ ಯಾವುದೇ ಸ್ಥಿರ ಅಥವಾ ಚರ ಆಸ್ತಿಗಳನ್ನು ಅಡಮಾನ ಮಾಡುವ ಮೂಲಕ, ಆಧಾರ ಮಾಡುವ ಅಥವಾ ಒತ್ತೆ ಇಡುವ ಮೂಲಕ ಪ್ರಾಧಿಕಾರದ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದ ಸಾಲಪಡೆಯಬಹುದು ಅಥವಾ ಹಣವನ್ನು ಎತ್ತಬಹುದು;

(viii) ಪ್ರತಿ ಮೂರು ತಿಂಗಳಿಗೊಮ್ಮೆ ಹಣಕಾಸು ಲೆಕ್ಕಪತ್ರಗಳನ್ನು ಪರಿಶೀಲಿಸುವುದು ಮತ್ತು ಲೆಕ್ಕಪತ್ರಗಳನ್ನು ಅಂಗೀಕರಿಸುವುದು;

(ix) ಪ್ರಾಧಿಕಾರವು ನಿರ್ಧರಿಸಬಹುದಾದ ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ಅಧಿಕಾರಗಳೊಂದಿಗೆ ಅಂಥ ಇತರ ಸಲಹಾ ಮಂಡಳಿಗಳು ಮತ್ತು ಇತರ ವಿಶೇಷ ಸಮಿತಿಗಳನ್ನು ನೇಮಿಸುವುದು ಮತ್ತು ಹಾಗೆ ರಚಿಸಲಾದ ಯಾವುದೇ ಸಮಿತಿಗಳು ಮತ್ತು ಸಲಹಾ ಸಮಿತಿಗಳನ್ನು ವಿಘಟನೆ ಮಾಡುವುದು;

(x) ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸುವ ಅಂಥ ಆಡಳಿತಾತ್ಮಕ, ಹಣಕಾಸು ಅಥವಾ ಇತರ ಅಧಿಕಾರಗಳನ್ನು ಪ್ರಾಧಿಕಾರದ ಯಾವುದೇ ಸಮಿತಿ ಅಥವಾ ಅಧಿಕಾರಿಗೆ ಪ್ರತ್ಯಾಯೋಜಿಸುವುದು ಮತ್ತು ಈ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಮಿತಿಗಳನ್ನು ಕೂಡ ನಿಯಮಿಸುವುದು ಹಾಗೂ ಈ ಬಗ್ಗೆ ಮಾರ್ಗಸೂಚಿಗಳನ್ನು ಒದಗಿಸುವುದು;

(xi) ಪ್ರಾಧಿಕಾರ ಅಥವಾ ಅದರ ಅಧಿಕಾರಿಗಳ ಅಥವಾ ಅನ್ಯಥಾ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಅಥವಾ ಅವರ ವಿರುದ್ಧ ಯಾವುದೇ ಕಾನೂನು ವ್ಯವಹರಣೆಗಳನ್ನು ಹೂಡುವುದು, ನಡೆಸುವುದು, ಜೋಡಿಸುವುದು ಅಥವಾ ರದ್ದುಗೊಳಿಸುವುದು ಮತ್ತು ಪ್ರಾಧಿಕಾರದ ಮೂಲಕ ಅಥವಾ ಅದರ ವಿರುದ್ಧ ಯಾವುದೇ ಬಾಕಿ ಇರುವ ಋಣಗಳು ಮತ್ತು ಯಾವುದೇ ಕ್ಲೇಮುಗಳ ಅಥವಾ ಬೇಡಿಕೆಗಳ ಪಾವತಿಗಾಗಿ ಅಥವಾ ತೀರ್ಮಾನಕ್ಕಾಗಿ ರಾಜೀ ಮಾಡಿಕೊಳ್ಳುವುದು ಮತ್ತು ಸಮಯವನ್ನು ನೀಡುವುದು ಮತ್ತು ಯಾವುದೇ ವ್ಯತ್ಯಾಸಗಳು ಅಥವಾ ಮಧ್ಯಸ್ಥಿಕೆಗಳನ್ನು ಉಲ್ಲೇಖಿಸುವುದು ಹಾಗೂ ಅದರ ಮೇಲೆ ಮಾಡಲಾದ ಯಾವುದೇ ಐತೀರ್ಪನ್ನು ಪಾಲಿಸುವುದು ಮತ್ತು ನಿರ್ವಹಿಸುವುದು;

(xii) ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಧ್ಯೇಯೋದ್ದೇಶಗಳನ್ನು ಈಡೇರಿಸಲು ಪ್ರಾಸಂಗಿಕವಾದ ಅಥವಾ ನೆರವಾಗುವ ಅಂಥ ಎಲ್ಲಾ ಕ್ರಮಗಳು, ಕಾರ್ಯಗಳು, ವಿಷಯಗಳು ಮತ್ತು ಕರ್ತವ್ಯಗಳನ್ನು ಮಾಡುವುದು;

(xiii) ಈ ಮುಂದಿನವುಗಳನ್ನು ಚರ್ಚಿಸುವುದು ಮತ್ತು ಅಂಗೀಕರಿಸುವುದು ಅಥವಾ ಅನುಮೋಸುವುದು,- (ಎ) ವಾರ್ಷಿಕ ಆಯವ್ಯಯ; (ಬಿ) ವಾರ್ಷಿಕ ಕ್ರಿಯಾಯೋಜನೆ; (ಸಿ) ವಾರ್ಷಿಕ ಆಡಳಿತಾತ್ಮಕ ವರದಿ; ಮತ್ತು (ಡಿ) ವಾರ್ಷಿಕ ಲೆಕ್ಕಪರಿಶೋಧನಾ ವರದಿ.

(xiv) ಸಮಿತಿಗಳು, ಸಲಹಾ ನಿಕಾಯಗಳ ಯಾವುದೇ ನಿರ್ಧಾರಗಳು ಅಥವಾ ವರದಿಗಳನ್ನು ಬದಲಾಯಿಸುವುದು, ಒಪ್ಪುವುದು ಅಥವಾ ತಿರಸ್ಕರಿಸುವುದು ಮತ್ತು ಪ್ರಾಧಿಕಾರದ ಹಿತಾಸಕ್ತಿಯಲ್ಲಿ ಸಮಿತಿಗಳಿಗೆ ನಿರ್ದೇಶನಗಳನ್ನು ನೀಡುವುದು;

(xv) ಹಣಕಾಸು ಸಂಪನ್ಮೂಲಗಳನ್ನು ಹೆಚ್ಚಿಸುವ ವಿಷಯಗಳನ್ನು ನಿರ್ಧರಿಸುವುದು ಮತ್ತು ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳನ್ನು ಸಮತೋಲನಗೊಳಿಸುವುದು;

(xvi) ಪ್ರಾಧಿಕಾರದ ಸ್ವತ್ತುಗಳ ಸುರಕ್ಷತೆ ಮತ್ತು ಭದ್ರತೆಯ ವಿಷಯಗಳನ್ನು ನಿರ್ಧರಿಸುವುದು;

(xvii) ಮಂಜೂರಾತಿಗಳು ಮತ್ತು ಸಂದಾಯಗಳ ವಿಷಯಗಳಲ್ಲಿ ಆಯುಕ್ತನ ಹಣಕಾಸು ಅಧಿಕಾರಗಳನ್ನು ಗೊತ್ತುಪಡಿಸುವುದು;

(xviii) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಯಾವುದೇ ಇತರ ಸಂಘಟನೆಗಳಿಂದ ಹಣಕಾಸು ನೆರವನ್ನು ಕೋರುವ ಪ್ರಾಜೆಕ್ಟ್ ವರದಿಗಳನ್ನು ಅನುಮೋದಿಸುವುದು;

(xix) ಕಾಲಕಾಲಕ್ಕೆ ಕೈಗೊಳ್ಳಬೇಕಾದ ಅಥವಾ ಆಯೋಜಿಸಬೇಕಾದ ವಿವಿಧ ಕಾರ್ಯಕ್ರಮಗಳನ್ನು ಅನುಮೋದಿಸುವುದು ಮತ್ತು ಅದನ್ನು ಆಯೋಜಿಸುವುದಕ್ಕಾಗಿ ಅಂಥ ಕಾರ್ಯಕ್ರಮಗಳಿಗಾಗಿ ಹಣಕಾಸು ಅನುದಾನಗಳನ್ನು ಮಂಜೂರು ಮಾಡುವುದು;

(xx) ಆಯುಕ್ತ, ನಿರ್ದೇಶಕರು, ವಿಭಾಗಗಳ ಇಲಾಖಾ ಮುಖ್ಯಸ್ಥರು ಒಳಗೊಂಡಂತೆ ಪ್ರಾಧಿಕಾರದ ಸಿಬ್ಬಂದಿಯ ಬಡ್ತಿಗಳು ಮತ್ತು ಇತರ ಸೇವಾ ವಿಷಯಗಳು ಮತ್ತು ಪ್ರಾಧಿಕಾರದ ಸಿಬ್ಬಂದಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲೆ 17ನೇ ಪ್ರಕರಣದ (3)ನೇ ಉಪ ಪ್ರಕರಣದ ಅಡಿಯಲ್ಲಿ ನಿರ್ಧಾರಗಳಿಗಾಗಿ ಅಪೀಲು ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುವುದು;

(xxi) ಆಯುಕ್ತರಿಗೆ ರಜೆಯನ್ನು ಮಂಜೂರು ಮಾಡುವುದು ಮತ್ತು ಕಚೇರಿಯಿಂದ ಆತನ ಗೈರುಹಾಜರಿಯ ಅವಧಿಯಲ್ಲಿ ಆಯುಕ್ತನ ಹುದ್ದೆಗೆ ಪ್ರಭಾರ ಏರ್ಪಾಡುಗಳನ್ನು ಮಾಡುವುದು;

(xxii) ಪ್ರಾಜೆಕ್ಟ್‌ಗಾಗಿ ಸಮಾಲೋಚಕರನ್ನು ನೇಮಕ ಮಾಡುವುದು ಹಾಗೂ ಅಗತ್ಯ ಮತ್ತು ಅವಶ್ಯಕತೆಗಳ ಆಧಾರದ ಮೇಲೆ ಅವರ ಗೌರವಧನಗಳನ್ನು ನಿಗಧಿಪಡಿಸುವುದು;

(xxiii) ಪಿಲಿಕುಳ ಪ್ರಾಜೆಕ್ಟ್ ಕಟ್ಟಡದ ಭದ್ರತೆ, ಆರೋಗ್ಯ ಮತ್ತು ಸ್ವಚ್ಛತೆ, ನೀರು ಸರಬರಾಜು, ಪ್ರಾಣಿಸಂಗ್ರಹಾಲಯದ ವನ್ಯಜೀವಿಗಳ ಕ್ಷೇಮ, ಸಿಬ್ಬಂದಿ ಕಲ್ಯಾಣದ ವಿಷಯಗಳು, ಸಂಪನ್ಮೂಲಗಳ ವೃದ್ಧಿ, ಪ್ರಚಾರ ಮತ್ತು ಗುರುತಿಸುವ ವಿಷಯಗಳನ್ನು ಗಮನಿಸುವುದು;

(xxiv) ಪ್ರಾಧಿಕಾರದ ಸೌಲಭ್ಯಗಳ ಉತ್ತಮ ಉಪಯೋಗಕ್ಕಾಗಿ ಭೋಗ್ಯ ಅಥವಾ ಕರಾರು ಮೇಲೆ ಕೊಡುವ ಕುರಿತು ನಿರ್ಧರಿಸಲು ಸ್ವತ: ನಿರ್ಮಾಣ (Build-Own) ಮತ್ತು ವರ್ಗಾವಣೆ ಸ್ಕೀಮಿನ ಮೇಲೆ ಸಾರ್ವಜನಿಕ ಖಾಸಗಿ ಪಾಲುದಾರರಿಗೆ ಕೊಡಬೇಕಾದ ಪ್ರಾಜೆಕ್ಟ್‌ಗಳನ್ನು ನಿರ್ಧರಿಸುವುದು; ಪರಂತು, ಸಾರ್ವಜನಿಕ ಖಾಸಗಿ ಪಾಲುದಾರರ ಅಡಿಯಲ್ಲಿ ಯಾವುದೇ ಖಾಸಗಿ ಪಾಲುದಾರರ ಪಾತ್ರಗಳನ್ನು ಸ್ಪಷ್ಟವಾಗಿ ಪರಿಭಾಷಿಸತಕ್ಕದ್ದು. ಅವರ ಲಾಭವು ಪ್ರಾಜೆಕ್ಟ್‌ನಲ್ಲಿನ ಸರ್ಕಾರದ ಲಾಭವನ್ನು ಮೀರತಕ್ಕದ್ದಲ್ಲ. ಖಾಸಗಿ ಪಾಲುಕಾರರು ಸಮಾನ ಹಣಕಾಸು ವಂತಿಗೆಯನ್ನು ಮಾಡತಕ್ಕದ್ದು;

(xxv) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಈ ಅಧಿನಿಯಮದ ಯಾವುದೇ ಉದ್ದೇಶಗಳನ್ನು ನೆರವೇರಿಸಲು ಅವಶ್ಯಕ ಅಥವಾ ಯುಕ್ತವೆಂದು ಪರಿಗಣಿಸಬಹುದಾದ ಎಲ್ಲಾ ಅಂಥ ಕಾರಾರುಗಳನ್ನು ಮಾಡಿಕೊಳ್ಳುವುದು ಮತ್ತು ನೆರವೇರಿಸುವುದು ಮತ್ತು ಪ್ರತಿಯೊಂದು ಕರಾರನ್ನು ಆಯುಕ್ತರು ಪ್ರಾಧಿಕಾರದ ಪರವಾಗಿ ಮಾಡತಕ್ಕದ್ದು;

(xxvi) ಪಿಲಿಕುಳ ಪ್ರದೇಶದ ನಿರ್ವಹಣೆಗಾಗಿ ಅವಕಾಶವನ್ನು ಕಲ್ಪಿಸುವುದು, ಇದು, ಸ್ವತ್ತುಗಳನ್ನು ನಿರ್ವಹಿಸಬೇಕಾದ ವಿಧಾನ, ಪಿಲಿಕುಳದಲ್ಲಿ ಬಳಸತಕ್ಕ ವಿವಿಧ ಸೌಲಭ್ಯಗಳಿಗಾಗಿ ಪಿಲಿಕುಳ ಪ್ರದೇಶದ ಸಂದರ್ಶಕರಿಂದ ಸಂಗ್ರಹಿಸಬೇಕಾದ ದರಗಳು, ಶುಲ್ಕಗಳು ಅಥವಾ ಇತರ ಚಾರ್ಜುಗಳ ಮತ್ತು ಪ್ರಾಧಿಕಾರದ ಆಸ್ತಿಗಳ ಸ್ವಾಧೀನದಲ್ಲಿ ಲೈಸೆನ್ಸುದಾರರು ಅಥವಾ ವ್ಯಕ್ತಿಗಳಿಂದ ಪ್ರಾಧಿಕಾರವು ನಿರ್ಧರಿಸಬಹುದಾದಂತೆ, ಲೈಸೆನ್ಸು ಶುಲ್ಕವನ್ನು ವಿಧಿಸುವ ಅಧಿಕಾರದಂಥವುಗಳನ್ನು ಒಳಗೊಳ್ಳತಕ್ಕದ್ದು.

**11. ಚೇರ್‌ಮನ್‌ರವರ ವಿಶೇಷ ಅಧಿಕಾರಗಳು.-** ತುರ್ತು ಸಂದರ್ಭದಲ್ಲಿ, ಪ್ರಾಧಿಕಾರದ ಸಭೆಯನ್ನು ಕರೆಯಲು ಸಾಕಷ್ಟು ಸಮಯವಿಲ್ಲದಿದ್ದಲ್ಲಿ, ಧ್ಯೇಯೋದ್ದೇಶದ ಪರಿಣಾಮಕಾರಿ ನೆರವೇರಿಕೆಗಾಗಿ, ಚೇರ್‌ಮನ್‌ರವರು ತಾನಾಗಿಯೇ ನೇರ ಕ್ರಮಗಳನ್ನು ಕೈಗೊಳ್ಳುವ ವಿಶೇಷ ಅಧಿಕಾರವನ್ನು ಹೊಂದಿರತಕ್ಕದ್ದು, ಚೇರ್‌ಮನ್‌ರವರು ಕ್ರಮಕೈಗೊಂಡು ಪ್ರಾಧಿಕಾರದ ಮುಂದೆ ಅದರ ತಕ್ಷಣದ ಮುಂದಿನ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸ್ಥಿರೀಕರಣವನ್ನು ಕೋರಬಹುದು. ಸಭೆಯ ಗಣಪೂರ್ತಿಯು ಶೇಕಡಾ ಐವತ್ತು ಅಥವಾ ಅದಕ್ಕಿಂತ ಹೆಚ್ಚು ಇರತಕ್ಕದ್ದು.

ಅವಗಾಹನೆಗೆ ಮಂಡಿಸಿದೆ.

<u>ನಿರ್ಣಯ:</u> **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018ರ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 08 ಶಾಸನ 2018, ದಿ:09-03-2018 ಕರ್ನಾಟಕ ವಿಶೇಷ ರಾಜ್ಯಪತ್ರಿಕೆಯಲ್ಲಿ ದಿ:09-03-2018 ರಂದು ಮೇಲಿನಂತೆ ಅಧೀಕೃತವಾಗಿ ಪ್ರಕಟಗೊಂಡಿರುವುದನ್ನು ಮತ್ತು ಈ ಉಪಬಂಧಗಳು ದಿನಾಂಕ 24-12-2019 ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಿದ ಅಧಿಸೂಚನೆ ಸಂಖ್ಯೆ:ಐಟಿಬಿಟಿ223ಎಸ್‌ಟಿಎಸ್2019 ದಿನಾಂಕ 24.12.2019 ನ್ನು ಸಭೆಯ ಅವಗಾಹನೆಗೆ ತರಲಾಯಿತು. ಅಧಿಸೂಚನೆ ಕಲಂ 10 ಮತ್ತು 11 ರಲ್ಲಿನ ಉಪಬಂಧಗಳನ್ನು ಸಭೆಯು ಗಮನಿಸಿತು.**

**ವಿಷಯ ಸಂಖ್ಯೆ 2 : ಪ್ರಾಧಿಕಾರದ ಸಭೆಗಳಲ್ಲಿ ವ್ಯವಹರಣೆಗೆ ಸಂಬಂಧಿಸಿದ ವ್ಯವಹರಣೆಗಳ ನಿಯಮಗಳ (Regulations) ಕರಡು ಅನುಮೋದನೆ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018 ರ ಕಲಂ 8(2) ರಂತೆ ಪ್ರಾಧಿಕಾರವು ತನ್ನ ಸಭೆಗಳಲ್ಲಿ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿ ಅಂತಹ ವ್ಯವಹರಣೆಗಳ ನಿಯಮಗಳನ್ನು ಅನುಸರಿಸತಕ್ಕದ್ದೆಂದು ತಿಳಿಸಲಾಗಿದೆ. ಆ ಪ್ರಕಾರ ಪ್ರಾಧಿಕಾರದ ಸಭೆಗಳಲ್ಲಿ ವ್ಯವಹರಣೆಗೆ ಸಂಬಂಧಿಸಿದ ವ್ಯವಹರಣೆಗಳ ನಿಯಮಗಳ (Regulations) ಕರಡನ್ನು ಅನುಮೋದನೆಗೆ ಒಪ್ಪಿಸಿದೆ. ಕರಡು ಅನುಮೋದನೆಯಾದ ನಂತರ ಸರಕಾರದ ಅಂಗೀಕಾರಕ್ಕೆ ಸಲ್ಲಿಸಲಾಗುವುದು.

## DRAFT

## THE PILIKULA DEVELOPMENT AUTHORITY REGULATIONS -2022

**Regulation No.1.**

In exercise of the powers conferred by section 40 of the The Pilikula Development Authority Act, 2018 (Karnataka Act 9 of 2018) and with previous sanction of the Government the Pilikula Development Authority hereby makes the following regulations, namely:-

1. Title and Commencement :-

   (1) These regulations may be called as the Pilikula Development Authority meeting regulations, 2022

   (2) They shall come into force from the date of their publication.

2. Meetings of the Authority (Sec. 8 (2))

   I. Seven clear days intimation specifying the date, time and venue of meeting of the Authority and the agenda of business to be transacted there at shall be given to the concerned by the Commissioner who is also the Member Secretary. However the proceedings of any meeting shall not be invalidated for any minor irregularity.

   II. Every meeting of the Authority shall be presided over by the Chairman and in his absence, the meetings shall be adjourned.

   III. Not less than 1/3rd members of the Authority shall constitute a quorum at any meeting of the Authority. If there is no quorum, within 30 minutes of the appointed time of the meeting, the meeting shall stand adjourned. The requirement of quorum shall not apply to such adjourned meeting.

   IV. Any member with the permission of Chairperson may raise new issues to be discussed in the meeting.

   V. The Commissioner shall cause minutes of every meeting of the Authority to be entered in a register, duly signed by the Chairman. It shall be in the custody of the Commissioner.

By order of the Authority

**ನಿರ್ಣಯ:** **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018 ರ ಕಲಂ 8(2) ರಂತೆ ಪ್ರಾಧಿಕಾರವು ತನ್ನ ಸಭೆಗಳಲ್ಲಿ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿ ಮಂಡಿಸಿದ ವ್ಯವಹರಣೆ ನಿಯಮಗಳ (Regulations) ಕರಡನ್ನು ಕಂಡಿಕೆ 2(V) ನ್ನು ಪರಿಷ್ಕರಿಸಿ ಈ ಕೆಳಗಿನಂತೆ ಅಂಗೀಕರಿಸಲಾಯಿತು.**

**The Commissioner shall cause minutes of every meeting of the Authority to be entered in a register duly signed by the Chairman & Commissioner. It shall be in the custody of the Commissioner.**

**ವಿಷಯ ಸಂಖ್ಯೆ 3 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಿಟ್ ವರದಿಗಳ ಅನುಮೋದನೆ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018 ರ ಕಲಂ 10(2) (xiii) ರಂತೆ ವಾರ್ಷಿಕ ಆಡಿಟ್ ವರದಿಗಳನ್ನು ಪ್ರಾಧಿಕಾರವು ಅನುಮೋದಿಸಬೇಕಾಗಿದೆ. 2018-19, 2019-20 ಮತ್ತು 2020-21 ನೇ ಸಾಲಿನ ಹಿಂದಿನ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ವಾರ್ಷಿಕ ಆಡಿಟ್ ವರದಿಗಳನ್ನು ಅನುಮೋದನೆಗೆ ಒಪ್ಪಿಸಿದೆ.

**ನಿರ್ಣಯ:** **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2018-19, 2019-20 ಮತ್ತು 2020-21 ನೇ ಸಾಲಿನ ಹಿಂದಿನ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ವಾರ್ಷಿಕ ಆಡಿಟ್ ವರದಿಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು. ಅಲ್ಲದೆ ಆಡಿಟ್ ವರದಿಗಳಲ್ಲಿ ಕಂಡುಬರುವ ಸ್ಥಿರ ಚರ ಆಸ್ತಿಗಳನ್ನು ಭೌತಿಕ ಪರಿಶೀಲನೆ ನಡೆಸಿ ಅಸ್ತಿತ್ವದಲ್ಲಿ ಇಲ್ಲದಿರುವ ಸ್ಥಿರ ಚರ ಸೊತ್ತುಗಳನ್ನು ನಿಯಾಮಾನುಸಾರ write-off ಮಾಡಲು ಕ್ರಮ ಜರಗಿಸುವುದು.**

**ವಿಷಯ ಸಂಖ್ಯೆ 4 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2021-22 ನೇ ಸಾಲಿನ ಆರ್ಥಿಕ ವೆಚ್ಚಗಳ ಪರಿಶೀಲನೆ ಮತ್ತು ಅನುಮೋದನೆ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ ಕಲಂ 10(2) (viii) ರಂತೆ 2021-22 ನೇ ಸಾಲಿನ ಆರ್ಥಿಕ ವೆಚ್ಚಗಳ ಪರಿಶೀಲನೆ ಮತ್ತು ಅನುಮೋದನೆಗೆ ಮಂಡಿಸಿದೆ. (unaudited)

**ನಿರ್ಣಯ:** **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2021-22 ನೇ ಸಾಲಿನ (unaudited) ಆರ್ಥಿಕ ವೆಚ್ಚಗಳನ್ನು ಪರಿಶೀಲಿಸಲಾಯಿತು. ಈ ಸಾಲಿನ ಆಡಿಟ್ ವರದಿಗಳನ್ನು ಮುಂದಿನ ಸಭೆಗೆ ಮಂಡಿಸಲು ಆಡಿಟರ್ ರವರು ಹಾಜರಾಗಲು ನಿರ್ದೇಶಿಸಲಾಯಿತು.**

**ವಿಷಯ ಸಂಖ್ಯೆ 5 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2022-23 ಸಾಲಿಗೆ ಬೇಕಾಗಿರುವ ಅನುದಾನದ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 10(2) (xiii) ರಂತೆ 2022-23 ಸಾಲಿಗೆ ಬೇಕಾಗಿರುವ ಒಟ್ಟು ರೂ. 1589.13 ಲಕ್ಷಗಳ ಅನುದಾನಕ್ಕೆ ವಿಸ್ತೃತ ಕ್ರಿಯಾಯೋಜನೆಯನ್ನು ಸರಕಾರಕ್ಕೆ ದಿನಾಂಕ 19-11-2021 ರಂದು ಸಲ್ಲಿಸಲಾಗಿದೆ. ಸರಕಾರವು ದಿನಾಂಕ: 4-4-2022 ರ ಆದೇಶದಂತೆ 2022-23 ನೇ ಸಾಲಿಗೆ ಪ್ರಾಧಿಕಾರಕ್ಕೆ ಒಟ್ಟು ರೂ. 140.00 ಲಕ್ಷ ಮೊಬಲಗನ್ನು ಮಂಜೂರು ಮಾಡಿದೆ. ತದನಂತರ ದಿನಾಂಕ 6-7-2022 ರಂದು ರೂ. 369.81 ಲಕ್ಷ ಮೊಬಲಗಿನ ವಿಸ್ತೃತ ಪ್ರಸ್ತಾವನೆಯನ್ನು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು ಇವರಿಗೆ ಕಳುಹಿಸಿ ಸರಕಾರಕ್ಕೆ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸದ್ರಿ ಪ್ರಸ್ತಾವನೆಯಂತೆ ರೂ. 298.16 ಲಕ್ಷವನ್ನು ಬಿಡುಗಡೆ ಮಾಡಿರುತ್ತಾರೆ. ಒಟ್ಟು ರೂ. 438.16 ಲಕ್ಷ ಮಂಜೂರಾಗಿರುತ್ತದೆ.

ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ. (ರೂ. ಲಕ್ಷಗಳಲ್ಲಿ)

| ವಿವರ | 2022-23ನೇ ಸಾಲಿನ ಕ್ರಿಯಾ ಯೋಜನೆಯನ್ನು ಸಲ್ಲಿಸಿರುವುದು. ದಿ:19-11-2021 | 2022-23 ನೇ ಸಾಲಿಗೆ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸಲ್ಲಿಸಿರುವುದು. ದಿ:6-7-2022 | ಮಂಜೂರಾದ ಅನುದಾನ ಮತ್ತು ಹೆಚ್ಚುವರಿ ಅನುದಾನ |
|---|---|---|---|
| ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ | 1191.65 | 673.66 | 60+298.16=358.16 |
| ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ | 243.17 | 82.18 | 40.00 |
| ಸ್ವಾಮಿ ವಿವೇಕಾನಂದ ತಾರಾಲಯ | 154.31 | 75.59 | 40.00 |
| **ಒಟ್ಟು** | **1589.13** | **831.43** | **438.16** |

**ನಿರ್ಣಯ: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಬೇಕಾಗಿರುವ ಅನುದಾನಕ್ಕೆ ವಿಸ್ತೃತ ಕ್ರಿಯಾಯೋಜನೆಯನ್ನು ಸರಕಾರಕ್ಕೆ ಸಲ್ಲಿಸಿರುವುದನ್ನು ಹಾಗೂ ಸರಕಾರವು ಪ್ರಾಧಿಕಾರಕ್ಕೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ಅವಗಾಹನಿಸಲಾಯಿತು.**

**ವಿಷಯ ಸಂಖ್ಯೆ 6 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2022-23 ಸಾಲಿನ ವಾರ್ಷಿಕ ಅಂದಾಜು ಆಯವ್ಯಯದ ಪರಿಶೀಲನೆ ಮತ್ತು ಅನುಮೋದನೆ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 10(2) (xiii) ರಂತೆ 2022-23 ಸಾಲಿನ ವಾರ್ಷಿಕ ಅಂದಾಜು ಆಯವ್ಯಯದ ವಿವರಗಳನ್ನು ಪರಿಶೀಲನೆ ಮತ್ತು ಅನುಮೋದನೆಗೆ ಮಂಡಿಸಿದೆ.

**ನಿರ್ಣಯ: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2022-23 ಸಾಲಿನ ವಾರ್ಷಿಕ ಅಂದಾಜು ಆಯವ್ಯಯದ ವಿವರಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.**

**ವಿಷಯ ಸಂಖ್ಯೆ 7 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2022-23 ರ ಜೂನ್‌ವರೆಗಿನ ಆರ್ಥಿಕ ವೆಚ್ಚಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 10(2)(viii) ರಂತೆ 2022-23 ರ ಜೂನ್‌ವರೆಗಿನ ಆರ್ಥಿಕ ವೆಚ್ಚಗಳ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2022-23 ನೇ ಸಾಲಿನ ಜೂನ್‌ವರೆಗಿನ ಆರ್ಥಿಕ ವೆಚ್ಚಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.**

**ವಿಷಯ ಸಂಖ್ಯೆ 8 : ಘಟನೋತ್ತರ ಮಂಜೂರಾತಿ ನೀಡುವ ಕುರಿತು.**

**8.1)** ಪಿಲಿಕುಳ ಅಭಿವೃದ್ಧಿ ಕಾಯಿದೆ 2018ರಡಿ ರಚಿತವಾದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ನಿಯಮಗಳಡಿ ನಿಯಮ 4 ರಂತೆ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರು ನೀಡುವ ಅಧಿಕಾರ ಪ್ರತ್ಯಾಯೋಜನೆಯಾಗಿದ್ದರೂ ಪಾರದರ್ಶಕತೆ ಅಧಿನಿಯಮಗಳಂತೆ ಟೆಂಡರ್ ಕರೆಯುವ, ಅಂಗೀಕರಿಸುವ ಮತ್ತು ಟೆಂಡರ್ ಪ್ರಕ್ರಿಯೆಗಳಿಂದ ಭಾದಿತರು ಅಪೀಲು ಸಲ್ಲಿಕೆಗೆ ಪ್ರಾಧಿಕಾರ ನಿಯಮಗಳಡಿ ಅವಕಾಶವನ್ನು ಕಲ್ಪಿಸದಿರುವುದರಿಂದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಕಾಯಿದೆಯ ಕಲಂ 11ರಡಿ ಪ್ರಾಧಿಕಾರದ ಚೇರ್‌ಮೆನ್‌ರಿಗೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಮುಂದಿನ ಪ್ರಾಧಿಕಾರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಷರತ್ತುಗಳಿಗೆ ಒಳಪಟ್ಟು ಈ ಕೆಳಕಂಡಂತೆ ಅಧಿಕಾರ ವ್ಯಾಪ್ತಿಯನ್ನು ಹಂಚಿಕೆ ಮಾಡಿ ದಿನಾಂಕ 31-05-2021 ರಂತೆ ಆದೇಶ ಮಾಡಲಾಗಿದೆ.

| ಕ್ರ.ಸಂ | ವಿಷಯ | ಅಧಿಕಾರ ವ್ಯಾಪ್ತಿ |
|---|---|---|
| 1 | ಕೆಟಿಪಿಪಿ ಕಾಯ್ದೆಯ ಕಲಂ 9ರಂತೆ ಪ್ರಾಧಿಕಾರದ ಅಭಿವೃದ್ಧಿ ಕಾಮಗಾರಿ/ಯೋಜನೆಗಳ/ಸೇವೆಗಳ/ಸರಕುಗಳ ಟೆಂಡರ್ ಕರೆಯುವುದು | ಆಯುಕ್ತರು |
| 2 | ಮೇಲಿನಂತೆ ಕರೆದ ಟೆಂಡರ್ ಅನುಮೋದನೆ ಮತ್ತು ಅಂಗೀಕರಿಸುವುದು | ಆಯುಕ್ತರು |
| 3 | ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸುವುದು ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಳ್ಳುವುದು | ಆಯುಕ್ತರು |
| 4 | ಕೆಟಿಪಿಪಿ ಕಾಯ್ದೆಯ ಕಲಂ 16ರಂತೆ ಟೆಂಡರ್ ಪ್ರಕ್ರಿಯೆಗಳಿಂದ ಭಾದಿತರು ಅಪೀಲು ಸಲ್ಲಿಕೆ | ಚೇರ್‌ಮೆನ್/ ದ.ಕ. ಜಿಲ್ಲಾಧಿಕಾರಿಯವರು |

ಘಟನೋತ್ತರ ಮಂಜೂರಾತಿಗಾಗಿ ಒಪ್ಪಿಸಿದೆ.

**<u>ನಿರ್ಣಯ:</u> ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ಕಲಂ 11 ರಡಿ ಪ್ರಾಧಿಕಾರದ ಚೇರ್‌ಮೆನ್‌ರವರಿಗೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಮುಂದಿನ ಪ್ರಾಧಿಕಾರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಷರತ್ತುಗಳಿಗೆ ಒಳಪಟ್ಟು ದಿ: 05-09-2022 ರಂದು ಮಾಡಿರುವ ಅಧಿಕಾರ ವ್ಯಾಪ್ತಿಯ ಆದೇಶವನ್ನು ಈ ಕೆಳಕಾಣಿಸಿದಂತೆ ಪರಿಷ್ಕರಿಸಿ ಅನುಮೋದಿಸಲಾಯಿತು.**

| ಕ್ರ.ಸಂ | ವಿಷಯ | ಅಧಿಕಾರ ವ್ಯಾಪ್ತಿ |
|---|---|---|
| **1** | **ಕೆಟಿಪಿಪಿ ಕಾಯ್ದೆಯ ಕಲಂ 9ರಂತೆ ಪ್ರಾಧಿಕಾರದ ಅಭಿವೃದ್ಧಿ ಕಾಮಗಾರಿ/ಯೋಜನೆಗಳ/ಸೇವೆಗಳ/ಸರಕುಗಳ ಟೆಂಡರ್ ಕರೆಯುವುದು** | **ಆಯುಕ್ತರು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ** |
| **2** | **ಮೇಲಿನಂತೆ ಕರೆದ ಟೆಂಡರ್ ಅನುಮೋದನೆ ಮತ್ತು ಅಂಗೀಕರಿಸುವುದು** | **ಅಧ್ಯಕ್ಷರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಯವರು** |
| **3** | **ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸುವುದು ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಳ್ಳುವುದು** | **ಆಯುಕ್ತರು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ** |
| **4** | **ಕೆಟಿಪಿಪಿ ಕಾಯ್ದೆಯ ಕಲಂ 16ರಂತೆ ಟೆಂಡರ್ ಪ್ರಕ್ರಿಯೆಗಳಿಂದ ಭಾದಿತರು ಅಪೀಲು ಸಲ್ಲಿಕೆ** | **ಪ್ರಧಾನ ಕಾರ್ಯದರ್ಶಿ/ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆ, ಬೆಂಗಳೂರು** |

## 8.2) : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಮಾತೃತ್ವ (ಹೆರಿಗೆ) ರಜೆ ಸೌಲಭ್ಯವನ್ನು ವಿಸ್ತರಿಸುವ ಕುರಿತು.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವಾಗಿ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ ಪಿಲಿಕುಳ ನಿಸರ್ಗಧಾಮ ಸೊಸೈಟಿಯ ಮಹಿಳಾ ಸಿಬ್ಬಂದಿಗಳಿಗೆ 20 ದಿನಗಳ ಹೆರಿಗೆ ರಜೆಯನ್ನು ಪಡೆಯಲು ಅವಕಾಶಗಳನ್ನು ಕಲ್ಪಿಸಲಾಗಿತ್ತು. ಈಗ ಹಿಂದಿನ ಪಿಲಿಕುಳ ನಿಸರ್ಗಧಾಮವು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವಾಗಿ ಸರ್ಕಾರದ ಒಂದು ಶಾಸನಬದ್ಧ ಸಂಸ್ಥೆಯಾಗಿ ರೂಪುಗೊಂಡಿರುವುದರಿಂದ ಹಾಗೂ ಸರಕಾರದ ಆದೇಶ ಸಂಖ್ಯೆ ಆಇ08ಎಸ್‌ಆರ್‌ಎಸ್ 2022 ದಿನಾಂಕ 23.06.2022 ರಂತೆ ಸರಕಾರದ ಇಲಾಖೆಗಳಲ್ಲಿ ಹಾಗೂ ಅಂಗ ಸಂಸ್ಥೆಗಳಾದ ನಿಗಮ/ಮಂಡಳಿ/ಸ್ವಾಯತ್ತ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಎಲ್ಲಾ ಮಹಿಳಾ ನೌಕರರಿಗೆ ಈ ಕೆಳಕಂಡ

ಷರತ್ತುಗಳಿಗೆ ಒಳಪಟ್ಟ ಮಾತೃತ್ವ (ಹೆರಿಗೆ) ರಜೆಯ ಸೌಲಭ್ಯವನ್ನು ದಿನಾಂಕ 01.04.02022 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲಾಗಿದೆ.

1. ಮಾತೃತ್ವ ರಜೆಯನ್ನು ರಜೆಯ ಪ್ರಾರಂಭದ ದಿನಾಂಕದಿಂದ ಗರಿಷ್ಠ 180 ದಿನಗಳವರೆಗೆ (ಒಂದು ನೂರ ಎಂಭತ್ತು ದಿನಗಳು) ಮಂಜೂರು ಮಾಡಬಹುದು.
2. ಗರ್ಭಸ್ರಾವ ಅಥವಾ ಗರ್ಭಪಾತದಿಂದ ಗರ್ಭಧಾರಣೆಯು ಪರ್ಯಾವಸಾನಗೊಂಡ ಸಂದರ್ಭದಲ್ಲಿ ಮಾತೃತ್ವ ರಜೆಯು 6 ವಾರಗಳನ್ನು ಮೀರಬಾರದು.
3. ಇಂತಹ ರಜೆಗಾಗಿ ಸಲ್ಲಿಸಿದ ಅರ್ಜಿಯು ನೋಂದಾಯಿತ ವೃತ್ತಿನಿರತ ವೈದ್ಯರಿಂದ ಪಡೆದ ಪ್ರಮಾಣ ಪತ್ರದಿಂದ ಸಮರ್ಥಿತವಾಗಿರಬೇಕು.
4. ಮಾತೃತ್ವ ರಜೆಯ ಮೇಲೆ ತೆರಳುವ ನೌಕರರು ರಜೆಯ ನಿಕಟಪೂರ್ವದಲ್ಲಿ ಪಡೆಯುತ್ತಿದ್ದ ವೇತನಕ್ಕೆ ಸಮನಾದ ವೇತನವನ್ನು ರಜೆಯ ಅವಧಿಯಲ್ಲಿ ಪಡೆಯಲು ಅರ್ಹರಿರುತ್ತಾರೆ.
5. ಎರಡು ಅಥವಾ ಹೆಚ್ಚು ಮಕ್ಕಳನ್ನು ಹೊಂದಿರುವ ಮಹಿಳಾ ನೌಕರರಿಗೆ ಈ ಮಾತೃತ್ವ ರಜೆಯನ್ನು ಮಂಜೂರು ಮಾಡತಕ್ಕದ್ದಲ್ಲ. ಮಾತೃತ್ವ ರಜೆಗಾಗಿ ಸಲ್ಲಿಸುವ ಅರ್ಜಿಯೊಂದಿಗೆ ಸಂಬಂಧಿತ ನೌಕರರು ಈ ಕುರಿತು ಸ್ವಯಂ-ಘೋಷಣೆಯನ್ನು ಮಾತೃತ್ವ ರಜೆಯನ್ನು ಮಂಜೂರು ಮಾಡುವ ಅಧಿಕಾರಿಗೆ ಸಲ್ಲಿಸತಕ್ಕದ್ದು.

ಆದ್ದರಿಂದ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳಿಗೆ ಮತ್ತು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಸಿಬ್ಬಂದಿಗಳಿಗೆ ದಿನಾಂಕ 01.04.2022 ರಿಂದ ಜಾರಿಗೆ ಬರುವಂತೆ ಗರಿಷ್ಠ 6 ತಿಂಗಳ ಹೆರಿಗೆ ರಜೆಯನ್ನು ಮೇಲಿನ ಷರತ್ತುಗಳನ್ವಯ ಮಂಜೂರು ಮಾಡಲು ಮಾನ್ಯ ಜಿಲ್ಲಾಧಿಕಾರಿಯವರು ಮತ್ತು ಅಧ್ಯಕ್ಷರು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ರವರ ಅನುಮೋದನೆಯನ್ನು ಪಡೆಯಲಾಗಿದೆ.

ಈ ಕುರಿತು ಘಟನೋತ್ತರ ಮಂಜೂರಾತಿಗಾಗಿ ಒಪ್ಪಿಸಿದೆ.

<u>ನಿರ್ಣಯ:</u> **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳು ಮತ್ತು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳಿಗೆ ದಿನಾಂಕ 01-04-2022 ರಿಂದ ಜಾರಿಗೆ ಬರುವಂತೆ ಗರಿಷ್ಠ 6 ತಿಂಗಳ ಹೆರಿಗೆ ರಜೆಯನ್ನು ಮೇಲಿನ ಷರತ್ತುಗಳನ್ವಯ ಮಂಜೂರು ಮಾಡಲು ಮಾನ್ಯ ಅಧ್ಯಕ್ಷರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರು ಮಂಜೂರಾತಿ ನೀಡಿರುವುದನ್ನು ಅನುಮೋದಿಸಲಾಯಿತು.**

<u>**ವಿಷಯ ಸಂಖ್ಯೆ 9 : ಪ್ರಾಧಿಕಾರಕ್ಕೆ ಅವಶ್ಯಕವಾಗುವ ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳ ಸೃಜನೆ, ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳನ್ನು ರೂಪಿಸುವ ಕುರಿತು.**</u>

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018 ರ ಕಲಂ 16(1) ರಂತೆ ಪ್ರಾಧಿಕಾರಕ್ಕೆ ಅವಶ್ಯಕವಾಗಬಹುದಾದ ಅಧಿಕಾರಿ ಮತ್ತು ಸಿಬ್ಬಂದಿ ಬಲವನ್ನು ಸರಕಾರವು ಒದಗಿಸಬೇಕಾಗಿದೆ ಹಾಗೂ ಪ್ರಾಧಿಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದೆಂದು ತಿಳಿಸಲಾಗಿದೆ.

ಇದೇ ಅಧಿನಿಯಮದ ಕಲಂ 17(1) ರ ಪರಂತುಕದಂತೆ ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವ ಡಾ.ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನಕೇಂದ್ರ ಸೊಸೈಟಿ ಸಿಬ್ಬಂದಿಗಳ ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ನಿಯಮಗಳನ್ನು ನಿಯಮಿಸುವವರೆಗೆ ಈಗ ಇರುವ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು ಮುಂದುವರಿಯತಕ್ಕದೆಂದು ತಿಳಿಸಲಾಗಿದೆ. ಉಪ ಕಲಂ(3) ರಂತೆ ಸಿಬ್ಬಂದಿ ವೃಂದ ಬಲವನ್ನು

ಸೃಷ್ಟಿಸುವುದನ್ನು ಒಳಗೊಂಡಂತೆ ಸಿಬ್ಬಂದಿಯ ವಿಲೀನ ಹಾಗೂ ವೇತನ ಶ್ರೇಣಿಯನ್ನು ನಿಗಧಿಗೊಳಿಸುವುದು ಸರ್ಕಾರದ ಅನುಮೋದನೆಗೆ ಒಳಪಟ್ಟಿರಬೇಕೆಂದು ಕೂಡಾ ತಿಳಿಸಲಾಗಿದೆ.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ ಕಲಂ 16 ಮತ್ತು 17 ರಡಿ ಅವಕಾಶ ಮಾಡಿಕೊಟ್ಟಂತೆ ಪ್ರಾಧಿಕಾರದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಿಬ್ಬಂದಿ ಬಲ ಸೃಜಿಸಲು, ಸಿಬ್ಬಂದಿ ವಿಲೀನ ಹಾಗೂ ವೇತನ ಶ್ರೇಣಿ ನಿಗಧಿಗೊಳಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಅದರ ಕರಡನ್ನು 2 ತಿಂಗಳ ಅವಧಿಯಲ್ಲಿ ತಯಾರಿಸಿ ಒಪ್ಪಿಸುವಲ್ಲಿ ಸಮಾಲೋಚಕರಾಗಿ ಕಾರ್ಯನಿರ್ವಹಿಸಲು ಶ್ರೀ ರಿಚರ್ಡ್ ಲೋಬೊ, ರಾಜ್ಯ ಸರ್ಕಾರದ ಜಂಟಿ ಕಾರ್ಯದರ್ಶಿ (ನಿವೃತ್ತ) ಇವರನ್ನು ನೇಮಿಸಲಾಗಿದೆ. ಕರಡು ತಯಾರಿ ಪ್ರಗತಿಯಲ್ಲಿದೆ.

ಪ್ರಸ್ತುತ ಪ್ರಾಧಿಕಾರದಲ್ಲಿ ವಿವಿಧ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ವಿಭಾಗ | ನಿರಂತರ | ಗುತ್ತಿಗೆ | ಹೊರಗುತ್ತಿಗೆ | ಒಟ್ಟು |
|---|---|---|---|---|---|
| A 1 | ಆಡಳಿತ ಶಾಖೆ | 7 | 1 | 2 | 10 |
| 2 | ಜೈವಿಕ ಉದ್ಯಾನ | 18 | 9 | 1 | 28 |
| 3 | ಸಂಸ್ಕೃತಿ ಗ್ರಾಮ | 2 | 0 | 0 | 2 |
| 4 | ಕುಶಲಕರ್ಮಿಗ್ರಾಮ | 15 | 0 | 2 | 17 |
| 5 | ಬಾಟನಿ ಮತ್ತು ಹರ್ಬೇರಿಯಂ ಯೋಜನೆ | 5 | 0 | 0 | 5 |
| 6 | ತೋಟಗಾರಿಕೆ/ ಲೇಕ್‌ಗಾರ್ಡನ್ | 4 | 2 | 0 | 6 |
| 7 | ಪ್ರಾದೇಶಿಕ ವಿಜ್ಞಾನಕೇಂದ್ರ | 8 | 4 | 3 | 15 |
| 8 | ತಾರಾಲಯ | 0 | 2 | 0 | 2 |
| | **A ಒಟ್ಟು:** | **59** | **18** | **8** | **85** |
| B 9 | ರಕ್ಷಣಾ ವ್ಯವಸ್ಥೆ | – | – | 42 | 42 |
| 10 | ತೋಟಗಾರಿಕೆ | – | – | 40 | 40 |
| 11 | ಸ್ವಚ್ಛತಾ ಸೇವೆ | – | – | 19 | 19 |
| | **B ಒಟ್ಟು:** | | | **101** | **101** |
| | **ಒಟ್ಟು: A+B** | **59** | **18** | **109** | **186** |

ಅವಗಾಹನೆಗೆ ಮಂಡಿಸಿದೆ.

<u>ನಿರ್ಣಯ:</u> **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ ಕಲಂ 16 ಮತ್ತು 17ರಡಿ ಪ್ರಾಧಿಕಾರದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಿಬ್ಬಂದಿ ಬಲ ಸೃಜಿಸಲು, ವಿದ್ಯಾರ್ಹತೆ, ಮೀಸಲಾತಿ ಹಾಗೂ ವೇತನ ಶ್ರೇಣಿಗಳನ್ನು ನಿಗಧಿಪಡಿಸಿ ನೇಮಕಾತಿ ಕರಡು ನಿಯಮಗಳನ್ನು ತಯಾರಿಸಿ ಮುಂದಿನ ಪ್ರಾಧಿಕಾರ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

**<u>ವಿಷಯ ಸಂಖ್ಯೆ 10 : ಮೆ: ಜಿ.ಎಂ. ಅಮ್ಯೂಸ್‌ಮೆಂಟ್‌ಅಂಡ್ ಲೀಶರ್ ಪಾರ್ಕ್ ಕುರಿತು.</u>**

ಹಿಂದಿನ ಪಿಲಿಕುಳ ನಿಸರ್ಗಧಾಮದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ (ಫನ್ ವರ್ಲ್ಡ್ ರಚನೆ ಬಗ್ಗೆ) ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಇವರ ಮುಖಾಂತರ Expression of Interest ಮೂಲಕ ರಾಷ್ಟ್ರೀಯ ಬಿಡ್ ಆಹ್ವಾನಿಸಿ ಮೆ: ಜಿ.ಎಂ. ಫನ್ ವರ್ಲ್ಡ್ ಪ್ರೈ.ಲಿ., (ಮೆ: ಜಿಎಂಎಫ್‌ಪಿ) ಇವರನ್ನು ಆಯ್ಕೆ ಮಾಡಲಾಗಿತ್ತು. ಆ ಪ್ರಕಾರ ದಿ: 24.6.2000 ರಂದು ಬಿ.ಒ.ಒ. ಆಧಾರದಲ್ಲಿ 15 ಎಕರೆ ಸ್ಥಳದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್‌ನ್ನು ತೆರೆಯಲು ಕರಾರನ್ನು ಮಾಡಿಕೊಳ್ಳಲಾಗಿದೆ.

| | | |
|---|---|---|
| 1 | ಲೈಸೆನ್ಸ್‌ಡೀಡ್ ದಿನಾಂಕ | 24.6.2000 |
| 2 | ರೆಕ್ಟಿಫಿಕೇಶನ್‌ಡೀಡ್ | 29.4.2002 |
| 3 | ಅವಧಿ (ರೆಕ್ಟಿಫಿಕೇಶನ್ ದಿನಾಂಕದಿಂದ) | 20 ವರ್ಷ |
| 4 | ಸೆಕ್ಯೂರಿಟಿ ಡೆಪಾಸಿಟ್ | 15.00 ಲಕ್ಷ |
| 5 | ವಾರ್ಷಿಕ ಲೈಸೆನ್ಸ್ ಶುಲ್ಕ (15 ಎಕ್ರೆ ತಲಾ ರೂ. 25,000/-) | 3.75 ಲಕ್ಷ |
| 6 | ಅಮ್ಯೂಸ್‌ಮೆಂಟ್ ಪಾರ್ಕ್ ಪ್ರಾರಂಭವಾದ ದಿನಾಂಕ | 01.01.2003 |

ತದನಂತರದಲ್ಲಿ ಸದ್ರಿ ಸಂಸ್ಥೆಯವರಿಗೆ ಅಮ್ಯೂಸ್‌ಮೆಂಟ್ ಪಾರ್ಕ್‌ನ್ನು ಅಭಿವೃದ್ಧಿಪಡಿಸುವ ಸಲುವಾಗಿ ಹುಡ್ಕೋ ಸಂಸ್ಥೆಯಿಂದ ಸಾಲವನ್ನು ಪಡೆಯಲು ಅವರಿಗೆ ಒದಗಿಸಿದ 15 ಎಕ್ರೆ ಜಮೀನಿಗೆ ಸರ್ಕಾರದಿಂದ ಉಪಗುತ್ತಿಗೆ ಆದೇಶವನ್ನು ಪಡೆದು ಆ ಸಂಸ್ಥೆಯೊಂದಿಗೆ ಮೂಲ ಕರಾರಿನ ಕೆಲವು ಶರ್ತಗಳನ್ನು ರದ್ದುಪಡಿಸಿ ಹೊಸದಾಗಿ ತಿದ್ದುಪಡಿ ಕರಾರನ್ನು ದಿ: 29.4.2002 ರಂದು ಮಾಡಿಕೊಳ್ಳಲಾಗಿದೆ. ತಿದ್ದುಪಡಿ ಕರಾರಿನಂತೆ ಗುತ್ತಿಗೆ ಅವಧಿಯು 20 ವರ್ಷಗಳಾಗಿದ್ದು ಅದು ತಿದ್ದುಪಡಿ ಕರಾರಿನ ದಿನಾಂಕದಿಂದ ಜಾರಿಗೆ ಬಂದಿದ್ದು ದಿ: 28.4.2022 ಕ್ಕೆ ಅವಧಿಯು ಮುಕ್ತಾಯವಾಗಿದೆ.

ತಿದ್ದುಪಡಿ ಕರಾರಿನ ಪ್ರಕಾರ ಮೇಲಿನ ಗುತ್ತಿಗೆದಾರರು 9 ತಿಂಗಳ ಅವಧಿಯೊಳಗೆ ಅಂದರೆ, ದಿ: 29.4.2002 ರಿಂದ 9 ತಿಂಗಳೊಳಗೆ (ದಿ: 28.1.2003 ರೊಳಗೆ) ಅಮ್ಯೂಸ್‌ಮೆಂಟ್ ಪಾರ್ಕ್ ತೆರೆಯಬೇಕಾಗಿತ್ತು. ಆದರೆ, ಈ ಅವಧಿಯಲ್ಲಿ ಅಂದರೆ ದಿ:2.1.2003 ರಲ್ಲಿ ವಾಟರ್ ಪಾರ್ಕ್‌ನ್ನು ಮಾತ್ರ ತೆರೆದು ಉಳಿದ ಆಕರ್ಷಣೆಗಳನ್ನು ಅವಧಿ ಪೂರ್ಣಗೊಳ್ಳುವವರೆಗೂ ಪ್ರಾರಂಭಿಸಿರುವುದಿಲ್ಲ ಮತ್ತು ಸರಕಾರದ ಆದೇಶದಂತೆ ಉಪಗುತ್ತಿಗೆಗೆ ವಹಿಸಿದ 15 ಎಕ್ರೆ ಜಮೀನನ್ನು ಪೂರ್ತಿಯಾಗಿ ಉಪಯೋಗಿಸಿರುವುದಿಲ್ಲ.

ಮೂಲ ಕರಾರಿನ ಷರತ್ತು ಸಂಖ್ಯೆ 20 ರಂತೆ ಯೋಜನೆಗೆ ಅಗತ್ಯವಿರುವ ವಿದ್ಯುಚ್ಛಕ್ತಿ ಸಂಪರ್ಕವನ್ನು ಗುತ್ತಿಗೆ ಪಡೆದ ಸಂಸ್ಥೆಯು ಭೂಗತ ಕೇಬಲ್ ಅಳವಡಿಸಿ ಟ್ರಾನ್ಸ್‌ಫಾರ್ಮರ್‌ನಿಂದ ಪಡೆಯಲು ಹಾಗೂ ನೀರಿನ ಸಂಪರ್ಕವನ್ನು ಹತ್ತಿರದ ನೀರಿನ ಪೈಪ್‌ಲೈನ್ ಸಂಪರ್ಕದಿಂದ ಗುತ್ತಿಗೆದಾರರ ವೆಚ್ಚದಿಂದಲೇ ವ್ಯವಸ್ಥೆ ಮಾಡಿಕೊಳ್ಳಲು ಮತ್ತು ಅಗತ್ಯವಿದ್ದಲ್ಲಿ ಬೋರ್‌ವೆಲ್ ತೆಗೆಯಲು ಅವಕಾಶವನ್ನು ನೀಡಲಾಗಿತ್ತು. ಆದರೂ ವಿದ್ಯುಚ್ಛಕ್ತಿ ಹಾಗೂ ನೀರು ಸರಬರಾಜು ವಿಚಾರವಾಗಿ ಗುತ್ತಿಗೆದಾರರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಿಎಂಪಿ ನಂ.78/2012 ನ್ನು ದಾಖಲಿಸಿದ್ದು ಮಾನ್ಯ ಉಚ್ಛ ನ್ಯಾಯಾಲಯವು ದಿ:2.7.2013 ರ ಆದೇಶದಂತೆ ನಿವೃತ್ತ ನ್ಯಾಯಮೂರ್ತಿಯವರನ್ನು ಆರ್ಬಿಟ್ರೇಟರ್ ಆಗಿ ನೇಮಕಾತಿ ಮಾಡಿದಂತೆ ತನಿಖೆಯನ್ನು ಪ್ರಾರಂಭಿಸಲಾಗಿತ್ತು. ಪ್ರಕರಣವು ಮಾನ್ಯ ಆರ್ಬಿಟ್ರೇಟರ್‌ರವರಲ್ಲಿ ವಿವರವಾದ ತನಿಖೆ ನಡೆದ ಬಳಿಕ ದಿ:18.6.2018 ರಂದು ಗುತ್ತಿಗೆದಾರರ ಕ್ಲೈಮನ್ನು ವೆಚ್ಚದೊಂದಿಗೆ ತಿರಸ್ಕರಿಸಿ ಈ ವಿವಾದದಲ್ಲಿ ವಕೀಲರ ಶುಲ್ಕ ರೂ. 2,82,500/- ನ್ನು ಪಿಲಿಕುಳಕ್ಕೆ ಪಾವತಿಸಲು ಆದೇಶಿಸಿ ಪ್ರಕರಣವನ್ನು ಇತ್ಯರ್ಥಗೊಳಿಸಿರುತ್ತಾರೆ.

ಈ ತೀರ್ಪಿನ ವಿರುದ್ಧ ಗುತ್ತಿಗೆದಾರರು 4ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಸಿವಿ ಸೂಟ್ ನಂ. 10/2020 ನ್ನು ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ದಿ:17.2.2020ರಂದು ನೀಡಿದ ತೀರ್ಪಿನಲ್ಲಿ ವೆಚ್ಚದೊಂದಿಗೆ ದಾವೆಯನ್ನು ವಜಾಗೊಳಿಸಿ ದಿ:20.6.2018 ರಂದು ಆರ್ಬಿಟ್ರೇಟರ್‌ರವರು ನೀಡಿದ ಐತೀರ್ಪನ್ನು ಎತ್ತಿ ಹಿಡಿದಿದೆ. ಮತ್ತು ಡಿಕ್ರಿಯಲ್ಲಿ ರೂ. 1,50,300/- ನ್ನು ಪಿಲಿಕುಳ ಸಂಸ್ಥೆಗೆ ಪಾವತಿಸುವಂತೆ ಆದೇಶಿಸಿದೆ. ಗುತ್ತಿಗೆದಾರರು ಈ ಮೊಬಲಗನ್ನು ಈವರೆಗೂ ಪಾವತಿಸಿರುವುದಿಲ್ಲ. ಈ ಮೇಲ್ಮನವಿಯಲ್ಲಿ ನೀಡಿದ ತೀರ್ಪಿನ ವಿರುದ್ಧ ಗುತ್ತಿಗೆದಾರರು ಪುನ: ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಕಮರ್ಶಿಯಲ್ ಅಪೀಲ್ (COMAP) No.170/2021) ನ್ನು ದಾಖಲಿಸಿದ್ದು ಅದು ತನಿಖೆಯಲ್ಲಿದೆ.

ಗುತ್ತಿಗೆದಾರರು ಗುತ್ತಿಗೆ ಶರ್ತಗಳನ್ನು ಉಲ್ಲಂಘಿಸಿರುವ ಕುರಿತು ಈ ಕಚೇರಿಯಿಂದ ದಿ:8.2.2019 ರಂದು ನೋಟೀಸು ನೀಡಿ ಕರಾರು ಸೊತ್ತನ್ನು ಒಂದು ತಿಂಗಳೊಳಗೆ ವಾಪಾಸ್ಸು ನೀಡಲು ತಿಳಿಸಲಾಗಿದೆ. ಗುತ್ತಿಗೆದಾರರು ತಿದ್ದುಪಡಿ ಕರಾರಿನ ಶರ್ತದಂತೆ ಕರಾರು ಅವಧಿಯನ್ನು ಮುಂದುವರಿಸಲು ದಿ:29.3.2021 ಹಾಗೂ ದಿ:27.4.2021 ರಂದು ಮನವಿ ಮಾಡಿದ್ದರೂ ಶರ್ತಗಳ ಉಲ್ಲಂಘನೆಯ ಆಧಾರದಲ್ಲಿ ಅವರ ಕೋರಿಕೆಗಳನ್ನು ಪರಿಗಣಿಸಿರುವುದಿಲ್ಲ.

ನಂತರದಲ್ಲಿ ದಿ:26.7.2021/5.8.2021 ಮತ್ತು ಅಂತಿಮ ನೋಟೀಸನ್ನು ದಿ:25.4.2022 ರಂದು ನೀಡಿ ಈ ನೋಟೀಸಿನ ದಿನಾಂಕದಿಂದ ಒಂದು ತಿಂಗಳೊಳಗೆ ಕರಾರು ಸೊತ್ತುಗಳನ್ನು ವಾಪಾಸ್ಸು ನೀಡಲು ಇಲ್ಲವಾದಲ್ಲಿ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ 1974 ರಂತೆ ಹೊರಹಾಕಲು ಕ್ರಮ ಜರುಗಿಸಲು ಕೋರುವುದಾಗಿ ತಿಳಿಸಲಾಗಿತ್ತು.

ಈ ನೋಟೀಸಿಗೆ ಉತ್ತರವನ್ನು ಗುತ್ತಿಗೆದಾರರು ದಿ:28.4.2022 ರಂದು ನೀಡಿರುತ್ತಾರೆ. ನಂತರ ದಿ: 2.5.2022 ರಂದು ಗುತ್ತಿಗೆದಾರರು ನ್ಯಾಯವಾದಿಗಳ ಮೂಲಕ ನೀಡಿರುವ ನೋಟೀಸಿನಲ್ಲಿ ಅವರ ಅವಧಿ ಮುಂದುವರಿಕೆ ಕೋರಿಕೆಗಳನ್ನು ಪರಿಗಣಿಸುವಂತೆಯೂ ಇಲ್ಲದಿದ್ದಲ್ಲಿ ಕಾನೂನು ಕ್ರಮಗಳನ್ನು ಜರುಗಿಸಲಾಗುವುದೆಂದೂ ತಿಳಿಸಿರುತ್ತಾರೆ. ಈ ಬಗ್ಗೆ ಉತ್ತರವನ್ನು ನ್ಯಾಯಾವಾದಿಗಳ ಮೂಲಕ 16-5-2022 ರಂದು ಕಳುಹಿಸಿದೆ.

ಈಗಾಗಲೇ ಕರಾರು ಅವಧಿ ಮುಗಿದಿರುವುದರಿಂದ, ಅಲ್ಲದೆ, ಸರ್ಕಾರವು ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ 1974 ರಂತೆ ಹೊರಹಾಕಲು ಸಕ್ಷಮ ಪ್ರಾಧಿಕಾರವನ್ನು ನೇಮಿಸಿರುವುದರಿಂದ ಗುತ್ತಿಗೆದಾರರ ಕೋರಿಕೆಯಂತೆ ಆರ್ಬಿಟ್ರೇಶನ್ ಕಾನ್ಸ್ಟಿಟ್ಯುಟ್ ಆರ್ಬಿಟ್ರೇಟರನ್ನು ನೇಮಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಅಲ್ಲದೆ, ಗುತ್ತಿಗೆದಾರರು ಕರಾರು ಶರ್ತಗಳನ್ನು ಉಲ್ಲಂಘಿಸಿರುವುದರಿಂದಲೂ ಅವಧಿ ವಿಸ್ತರಣೆಗೆ ಬಾಧ್ಯರಾಗುವುದಿಲ್ಲ.

1) ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ 20 ವರ್ಷಗಳ ಅವಧಿಗೆ ಸಂಬಂಧಿಸಿ ಮೂಲ ಕರಾರಿನಲ್ಲಾಗಲೀ, ತಿದ್ದುಪಡಿ ಕರಾರಿನಲ್ಲಾಗಲೀ Force majure ಶರ್ತಗಳು ಇಲ್ಲದಿರುವುದರಿಂದ ಇವರು ಯಾವುದೇ ಪರಿಹಾರಕ್ಕೆ ಅರ್ಹತೆ ಹೊಂದುವುದಿಲ್ಲ.
2) ಈ ಗುತ್ತಿಗೆದಾರರು ಇತ್ತೀಚೆಗೆ ದಿ:20.4.2022 ರಂದು ಇನ್ನೊಂದು ರಿಟ್‌ಅರ್ಜಿ ಸಂ.9380/2022 ನ್ನು ಸಲ್ಲಿಸಿದ್ದು ಈ ರಿಟ್ ಅರ್ಜಿಯು ತನಿಖೆಯಲ್ಲಿ ಬಾಕಿ ಇರುವುದು ಕಂಡುಬಂದಿದೆ.
3) ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮಾವಳಿ 27 ನ್ನು ಆಹ್ವಾನಿಸಿ ಷರತ್ತು ಸಂಖ್ಯೆ 14 ನ್ನು ಸಡಿಲಿಸಿ ಜಿ.ಎಂ. ಅಮ್ಯೂಸ್‌ಮೆಂಟ್ ಮತ್ತು ಲೀಸರ್ ಪಾರ್ಕಿಗೆ ನೀಡಿರುವ ಮೂಡುಶೆಡ್ಡೆ ಗ್ರಾಮದ ಸಂ.ನಂ. 80 ರ 15 ಎಕರೆ ಜಮೀನಿನ ಉಪಗುತ್ತಿಗೆಯ ಅವಧಿಯು ಕೂಡಾ ಮುಕ್ತಾಯವಾಗಿದೆ.
4) ಕೊರೊನಾ ಕಾರಣದಿಂದ ಮಾರ್ಚ್ 2020 ರಿಂದ ವಾಟರ್‌ಪಾರ್ಕ್ ಸ್ಥಗಿತಗೊಂಡಿತ್ತು. ಈಗ ಫೆಬ್ರವರಿ-2022 ರಲ್ಲಿ ಪುನರಾರಂಭಗೊಂಡಿದೆ.
5) ಈ ಸಂಸ್ಥೆಯವರು ಗುತ್ತಿಗೆ ಅವಧಿಯನ್ನು ವಿಸ್ತರಿಸಲು ದಿನಾಂಕ 23-5-2022 ರ ಪತ್ರದಲ್ಲಿ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿರುತ್ತಾರೆ. ಹಾಗೂ ದಿನಾಂಕ 27-6-2022 ರ ಪತ್ರದಲ್ಲಿ ಆಯುಕ್ತರನ್ನು ಕೋರಿರುತ್ತಾರೆ. ಆದರೆ ನ್ಯಾಯಾಲಯದಲ್ಲಿ ಹೂಡಿದ ದಾವೆಗಳನ್ನು ವಾಪಸ್ಸು ಪಡೆದಿರುವುದಿಲ್ಲ.

ಆದ್ದರಿಂದ ಈ ವಿಚಾರದಲ್ಲಿ ಚರ್ಚೆ ಮತ್ತು ನಿರ್ಧಾರ.

**<u>ನಿರ್ಣಯ:</u> ಮೇಲಿನ ವಿಚಾರದಲ್ಲಿ ಪರಿಶೀಲಿಸಿ ಈ ಕೆಳಕಂಡ ತೀರ್ಮಾನಕ್ಕೆ ಬರಲಾಯಿತು.**

1) **ಯಾವುದೇ ಒಡಂಬಡಿಕೆಗೆ ಬರುವ ಪೂರ್ವದಲ್ಲಿ ಮೊದಲಿಗೆ ಹಿಂದಿನ ಗುತ್ತಿಗೆದಾರರಾದ ಮೆ. ಜಿ.ಎಂ. ಅಮ್ಯೂಸ್‌ಮೆಂಟ್ ಮತ್ತು ಲೀಸರ್ ಪಾರ್ಕ್‌ನವರು ನ್ಯಾಯಾಲಯದಲ್ಲಿ ಹೂಡಿದ ದಾವೆಯನ್ನು ವಾಪಸ್ಸು ಪಡೆಯಬೇಕು.**
2) **ಅಮ್ಯೂಸ್‌ಮೆಂಟ್ ಮತ್ತು ವಾಟರ್‌ಪಾರ್ಕ್‌ನ ಗುತ್ತಿಗೆಯನ್ನು Request for Proposal ರೂಪದಲ್ಲಿ ಗುತ್ತಿಗೆದಾರರು ಸಂಬಂಧಿಸಿದ ಯೋಜನೆಯಲ್ಲಿ ಹೂಡುವ ಬಂಡವಾಳದ ಬಗ್ಗೆ ಷರತ್ತುಗಳನ್ನು ವಿಧಿಸಿಕೊಂಡು Swiss challenge ಮಾದರಿಯಲ್ಲಿ ಮುಂದಿನ 10 ವರ್ಷಗಳಿಗೆ ಗುತ್ತಿಗೆಯನ್ನು ನೀಡಲು ಪರಿಶೀಲಿಸಬಹುದೆಂದು ಅಭಿಪ್ರಾಯ ಪಡಲಾಯಿತು.**
3) **ಈ ಕುರಿತು ಮಾನ್ಯ ಜಿಲ್ಲಾಧಿಕಾರಿಯವರಿಂದ ಅನುಮೋದಿಸಲ್ಪಟ್ಟ ತಜ್ಞರ ತಂಡದಿಂದ ಅಭಿಪ್ರಾಯ ಪಡೆದು Request for Proposal ನ ಕರಡು ಪ್ರತಿಯನ್ನು ತಯಾರಿಸಿ ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ 11 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಒಳಗಡೆ ಎದುರು ಪದವಿಗೆ ಹಾದುಹೋಗುವ ರಸ್ತೆಯ ಕುರಿತು.

ಮಂಗಳೂರು ಮಹಾನಗರಪಾಲಿಕೆಯ ವಾಮಂಜೂರಿನಿಂದ ರಾಷ್ಟ್ರೀಯ ಹೆದ್ದಾರಿ 169 ರಿಂದ ಎಡಕ್ಕೆ ಸಾಗುವ ಮೂಡುಶೆಡ್ಡೆ ರಸ್ತೆಯು ಮುಂದೆ ಸಾಗಿ ಎದೆರೋಗಿಗಳ ಆಸ್ಪತ್ರೆಯ ಬಳಿಯಿಂದ ಎದುರುಪದವಿಗೆ ಹೋಗುವ ರಸ್ತೆಯು ಪಿಲಿಕುಳ ಪ್ರಾಧಿಕಾರದ ಮುಖ್ಯ ಚಟುವಟಿಕೆಯ ರಸ್ತೆಯಾಗಿದ್ದು ಪಿಲಿಕುಳದ ಒಳಗಿನ ಈ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತವಾಗಿಸಬೇಕೆಂದು O.S NO 235/2005 ರಂತೆ ಮಂಗಳೂರಿನ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಶ್ರೀ ಎಸ್. ಶಿವರಾಮ ಮಲ್ಲಿ ಮತ್ತು ಇತರರು 2005 ರಲ್ಲಿ ಹೂಡಿದ್ದ ದಾವೆಯನ್ನು ಮಾನ್ಯ ನ್ಯಾಯಾಲಯವು ದಿ: 6.9.2007ರ ಆದೇಶದಂತೆ ಪರಿಹಾರ ಕೋರಿಕೆಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಿಲ್ಲವೆಂಬ ಕಾರಣಕ್ಕಾಗಿ ವಜಾಗೊಳಿಸಿದ್ದರು. ಪುನಃ ಶ್ರೀ ಎಸ್. ಶಿವರಾಮ ಮಲ್ಲಿ ಮತ್ತು ಇತರರು ಈ ದಾವೆಯನ್ನು restore ಮಾಡಲು Mis Case NO.14/2007 ರಂತೆ ಅರ್ಜಿ ಸಲ್ಲಿಸಿರುವುದನ್ನು ಮಾನ್ಯ ನ್ಯಾಯಾಲಯವು ಮಾನ್ಯ ಮಾಡಿ O.S. NO 712/2012 ರಂತೆ ಹೊಸದಾಗಿ ನಂಬರ್ ನೀಡಿ ದಾವೆಯನ್ನು ಮುಂದುವರಿಸಲು ಆದೇಶಿಸಿದಂತೆ ಈ ದಾವೆಯು ತನಿಖೆಯಲ್ಲಿ ಮುಂದುವರಿಯುತ್ತಿದೆ.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವು 356 ಎಕ್ರೆ ವಿಸ್ತಾರವಾದ ಪ್ರದೇಶದಲ್ಲಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಅಪೂರ್ವ ಸಸ್ಯ, ಪ್ರಾಣಿ, ಸ್ಥಿರ, ಚರ ಸಂಪತ್ತನ್ನು ಹೊಂದಿದ್ದು ಇದನ್ನು ಭದ್ರತೆಯಿಂದ ಸಂರಕ್ಷಿಸಿಕೊಂಡು ಬರಬೇಕಾಗಿದೆ. ಅಲ್ಲದೇ ಪ್ರವಾಸಿಗರಿಗೆ ಅದರಲ್ಲೂ ವಿದ್ಯಾರ್ಥಿಗಳಿಗೆ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಮುಂದಿನ ದಿನಗಳಲ್ಲಿ ಅಭಿವೃದ್ಧಿಪಡಿಸಬೇಕಾಗಿದೆ. ಆದ್ದರಿಂದ ಎದುರುಪದವಿಗೆ ಹೋಗುವ ಪಿಲಿಕುಳದ ಒಳಗಿನ ರಸ್ತೆಯನ್ನು ಭದ್ರತೆಯ ದೃಷ್ಟಿಯಿಂದ ಮೇಲಿನ ವಿವಾದಗಳನ್ನು ಇತ್ಯರ್ಥಗೊಳಿಸಿ ಪಿಲಿಕುಳದ ಗಡಿ ರೇಖೆಯಲ್ಲಿ ಮುಚ್ಚುವುದು ಅನಿವಾರ್ಯವಾಗಿರುತ್ತದೆ. ಹೀಗೆ ಮಾಡಿದಲ್ಲಿ ಎದುರುಪದವಿನ ನಿವಾಸಿಗಳು ಸುಲಲಿತವಾಗಿ ಸಂಚರಿಸಲು ಪಿಲಿಕುಳದ ಹೊರಭಾಗದ ರಸ್ತೆಯನ್ನು ಅಭಿವೃದ್ಧಿಪಡಿಸುವುದು ಸೂಕ್ತವಾಗಿದ್ದು ಇದು ಅತೀ ಅಗತ್ಯವಾಗಿದೆ.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಹೊರಭಾಗದಲ್ಲಿ ಮೂಡುಶೆಡ್ಡೆಯಿಂದ ಎದುರು ಪದವು ಮೂಲಕ ಪರಾರಿ ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ಸಂಪರ್ಕಿಸುವ ರಸ್ತೆಯನ್ನು ಎದುರುಪದವು ಹಾಗೂ ಮೂಡುಶೆಡ್ಡೆಯ ನಿವಾಸಿಗಳು ಮೇಲಿನ ರಸ್ತೆಗೆ ಬದಲಿಯಾಗಿ ಉಪಯೋಗಿಸಲು ಅನುಕೂಲವಾಗುವಂತೆ ಸ್ಕೌಟ್ ಭವನದ ಪಕ್ಕ ಪರಾರಿ ರಸ್ತೆಗೆ ಸಂಪರ್ಕ ರಸ್ತೆಯನ್ನು ಕಲ್ಪಿಸಲು ಅನುದಾನ ಬಿಡುಗಡೆ ಮಾಡಲು ದ.ಕ.ಜಿಲ್ಲಾ ಪಂಚಾಯತಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಮೇಲಿನ ದಾವೆಯು 2012ರಿಂದ ಮುಂದುವರಿದಿದ್ದು ಸಂಧಾನ ಮೂಲಕ ಬಗೆಹರಿಸಲು ಈ ಹಿಂದೆ ಪ್ರಯತ್ನಗಳು ನಡೆದಿರುತ್ತದೆ. ಆದರೆ ಈವರೆಗೆ ಸಾಧ್ಯವಾಗಿರುವುದಿಲ್ಲ. ಈ ಪ್ರಕರಣವು ಅತೀ ಹಳೆಯ ಪ್ರಕರಣವಾಗಿರುವುದರಿಂದ ಸಂಧಾನದ ಮೂಲಕ ಬಗೆಹರಿಸಲು ಇರುವ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲಿಸಲು ಮಾನ್ಯ ಜಡ್ಜರು ಒತ್ತಡ ಹೇರಿರುವುದಾಗಿ ನಮ್ಮ ನ್ಯಾಯವಾದಿಯವರು ತಿಳಿಸಿರುತ್ತಾರೆ.

ಮೇಲಿನ ದಾವೆಯು ಮಾನ್ಯ ಎರಡನೇ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಇನ್ನೂ ತನಿಖಾ ಹಂತದಲ್ಲಿದ್ದು ಪಿಲಿಕುಳ ಪ್ರಾಧಿಕಾರದ ಅಭಿವೃದ್ಧಿಯ ದೃಷ್ಟಿಯಿಂದ ಈ ಸಮಸ್ಯೆಗೆ ಒಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ.

ಅವಗಾಹನೆಗೆ ಒಪ್ಪಿಸಿದೆ.

**ನಿರ್ಣಯ: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅಪಾರ ಸಂಪತ್ತಿನ ಸಂರಕ್ಷಣೆ, ಪ್ರಾಧಿಕಾರದ ಆಕರ್ಷಣೆಗಳನ್ನು ಅಭಿವೃದ್ಧಿ ಪಡಿಸಿ ಪ್ರವಾಸಿಗರಿಗೆ ಹೆಚ್ಚಿನ ಸವಲತ್ತನ್ನು ಕಲ್ಪಿಸಿ ಪಿಲಿಕುಳದ ಸೊಬಗನ್ನು ಹೆಚ್ಚಿಸುವ ವಿಚಾರದಲ್ಲಿ ಪ್ರಾಧಿಕಾರದ ಒಳಗಡೆಯಿಂದ ಎದುರುಪದವಿಗೆ ಹಾದು ಹೋಗುವ ರಸ್ತೆ ಗ್ರಾಮಸ್ಥರ ಬಳಕೆಗೆ ಮುಚ್ಚುವ ಮೊದಲು ಗ್ರಾಮಸ್ಥರಿಗೆ ತೊಂದರೆಯಾಗದಂತೆ ಬದಲಿ ರಸ್ತೆಯನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ ಪರಿಶೀಲಿಸಲು ಇದೇ ಸೆಪ್ಟೆಂಬರ್ ಕೊನೆಯ ವಾರದಲ್ಲಿ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮಾನ್ಯ ಸ್ಥಳೀಯ ಶಾಸಕರು ಇವರ ಉಪಸ್ಥಿತಿಯಲ್ಲಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ದ.ಕ. ಜಿಲ್ಲಾ ಪಂಚಾಯತ್, ಕಾರ್ಯನಿರ್ವಾಹಕ ಇಂಜಿನಿಯರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರು ದಾವೆಯಲ್ಲಿನ ಅರ್ಜಿದಾರರೊಂದಿಗೆ ಸಭೆ ನಡೆಸಿ ಸೂಕ್ತ ತೀರ್ಮಾನಕ್ಕೆ ಬರಲು ನಿರ್ಧರಿಸಲಾಯಿತು.**

ವಿಷಯ ಸಂಖ್ಯೆ 12 : ತಾರಾಲಯಕ್ಕೆ ತಾತ್ಕಾಲಿಕವಾಗಿ ಸಂಚಿತ ನೆಲೆಯಲ್ಲಿ ನೇಮಿಸಿದ ಸಿಬ್ಬಂದಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುವ ಬಗ್ಗೆ – ರಿಟ್ ಪಿಟಿಶನ್ ಸಂಖ್ಯೆ 8304/2022.

ಪಿಲಿಕುಳದಲ್ಲಿ 2018ರಲ್ಲಿ ಹೊಸದಾಗಿ 3ಡಿ ತಾರಾಲಯವನ್ನು ತೆರೆದಾಗ ಅದರ ಕೆಲಸ ಕಾರ್ಯಗಳಿಗಾಗಿ ಈ ಕೆಳಕಂಡಂತೆ ಸಿಬ್ಬಂದಿಗಳನ್ನು ಸಂಚಿತ ವೇತನದಡಿಯಲ್ಲಿ ತಾತ್ಕಾಲಿಕ ನೆಲೆಯಲ್ಲಿ ನೇಮಿಸಿ ಈವರೆಗೆ ಮುಂದುವರಿಸಿಕೊಂಡು ಬರಲಾಗಿತ್ತು.

| | | |
|---|---|---|
| • ವೈಜ್ಞಾನಿಕ ಅಧಿಕಾರಿ | – | 1 |
| • ಸಹಾಯಕ ಇಂಜಿನಿಯರ್ | – | 1 |
| • ಕಮ್ಯೂನಿಟಿ ಮೊಬಿಲೈಸರ್ | – | 1 |
| • ಶೈಕ್ಷಣಿಕ ಸಹಾಯಕರು | – | 1 |
| • ಟೆಕ್ನಿಶಿಯನ್ಸ್ | – | 2 |
| | ಒಟ್ಟು | 6 |

ಈಗ ಈ ಹುದ್ದೆಗಳಿಗೆ ಸಂಬಂಧಿಸಿ ಹೊರಗುತ್ತಿಗೆ ನೆಲೆಯಲ್ಲಿ ಸೇವೆಯನ್ನು ಪಡೆಯಲು ತೀರ್ಮಾನಿಸಿದಂತೆ ಹೊರಗುತ್ತಿಗೆ ಸೇವಾ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿತ್ತು. ಈ ಟೆಂಡರಿನ ವಿರುದ್ಧ ಮೇಲೆ ತಿಳಿಸಿದ ಸಂಚಿತ ವೇತನದಡಿಯಲ್ಲಿ ದುಡಿಯುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 8304/2022ನ್ನು ದಾಖಲಿಸಿ ಅವರುಗಳ ಸೇವೆಯನ್ನು ಖಾಯಂಗೊಳಿಸಲು ಕೋರಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿ:19-04-2022ರಂದು ಮಧ್ಯಂತರ ಆದೇಶವನ್ನು ಹೊರಡಿಸಿ ಪ್ರಾಧಿಕಾರದಿಂದ ಕರೆದ ಇ-ಟೆಂಡರ್ ನೋಟಿಸಿನ ನಡವಳಿಗಳನ್ನು ಮುಂದಿನ ತನಿಖೆಯ ದಿನಾಂಕದವರೆಗೆ ತಡೆಹಿಡಿದಿರುತ್ತಾರೆ. ಈ ರಿಟ್‌ಅರ್ಜಿಯನ್ನು ಪ್ರಾಧಿಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಎದುರಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಕುರಿತು ಚರ್ಚೆ ಮತ್ತು ನಿರ್ಧಾರಕ್ಕಾಗಿ ಮಂಡಿಸಿದೆ.

ನಿರ್ಣಯ: **ತಾರಾಲಯಕ್ಕೆ ಮತ್ತು ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಸಂಚಿತ ನೆಲೆಯಲ್ಲಿ ತಾತ್ಕಾಲಿಕವಾಗಿ ನೇಮಿಸಿರುವ ಸಿಬ್ಬಂದಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ರಿಟ್‌ಅರ್ಜಿ ಬಗ್ಗೆ ಅಗತ್ಯ ಮಾಹಿತಿಗಳನ್ನು ಪ್ರಾಧಿಕಾರದ ವಕೀಲರಿಗೆ ನೀಡಿ ರಿಟ್‌ಅರ್ಜಿಯನ್ನು ಎದುರಿಸಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ 13 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ 2021-22 ನೇ ಸಾಲಿನಲ್ಲಿ ಜರಗಿಸಿದ ಕಾರ್ಯಕ್ರಮಗಳು.

2021-22ನೇ ಸಾಲಿನಲ್ಲಿ ಆಯೋಜಿಸಲಾದ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ.

1. **ಪ್ರಾದೇಶಿಕ ವಿಜ್ಞಾನ ಕೇಂದ್ರ**

**a)** ಆನ್ ಲೈನ್ ಕಾರ್ಯಕ್ರಮಗಳು:

ಆಯ್ದ ಸಂಸ್ಥೆಗಳ ಸಹಕಾರದೊಂದಿಗೆ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಹಾಗೂ ಜನ ಸಾಮಾನ್ಯರಿಗೆ ಬೇಕಾಗುವ ಮಾಹಿತಿಗಳನ್ನು ನೀಡಲು ಈ ಕಾರ್ಯಕ್ರಮಗಳನ್ನು ನಡೆಸಲಾಯಿತು.

i. ವಿಶ್ವ ಪರಿಸರ ದಿನಾಚರಣೆ - 2021 -(05.06.2021)

ii. ಗಣಿತ, ರಸಾಯನಶಾಸ್ತ್ರ, ಲಸಿಕೆಗಳು ಮತ್ತು ಬಾಹ್ಯಾಕಾಶ -(15-19 ನವೆಂಬರ್, 2021)

iii. ಭೌತಶಾಸ್ತ್ರ, ಭೂಮಿ, ಬ್ರಹ್ಮಾಂಡ ಹಾಗೂ ಕುತೂಹಲಕಾರಿ ಪ್ರಶ್ನೆಗಳು-(29-11-2021 ರಿಂದ 03-12-2021)

iv. ಮೊಬೈಲ್ ಅಪ್ಲಿಕೇಶನ್, ಸಂಶೋಧನೆಗಳು, ವಿಜ್ಞಾನಿಗಳ ಜೀವನ ಚರಿತ್ರೆ ಹಾಗೂ ಆರೋಗ್ಯ (06–10 ಡಿಸೆಂಬರ್ 2021)

v. ನಕ್ಷತ್ರ ವೀಕ್ಷಣೆ, ಪರಿಸರ, ರೋಬೋಟ್ ಹಾಗೂ ಇಂಟರ್ ನೆಟ್ –(06–11 ಡಿಸೆಂಬರ್ 2021)

vi. ಕಪ್ಪು ಕುಳಿಗಳು, ಮಂಗಳಯಾನ , ಬಾಹ್ಯಾಕಾಶ ನೌಕೆಗಳು , ಬಳಕೆ- (20–24 ಡಿಸೆಂಬರ್ 2021)

**b)** ಪ್ರಾತ್ಯಕ್ಷಿಕೆಗಳು:

ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಪಠ್ಯಕ್ರಮ ಆಧಾರಿತ ಮತ್ತು ಮನೋರಂಜನೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿತ್ತು.

i. ಕರಾವಳಿ ಕಾಲೇಜು ಆಫ್ ಟೀಚರ್ ಎಜುಕೇಶನ್ ಮಂಗಳೂರು– 25.08.2021

ii. ಸರ್ಕಾರಿ ಶಿಕ್ಷಕರ ಶಿಕ್ಷಣ ವಿದ್ಯಾಲಯ ಮಂಗಳೂರು – 07.10.2021

iii. ಭಾರತ ಅಕಾಡೆಮಿ ಮಂಗಳೂರು – 10.12.2021

**c)** ವಿಜ್ಞಾನ ಕೇಂದ್ರ ಸಂದರ್ಶಕರಿಗೆ ಕಾರ್ಯಕ್ರಮಗಳು:

ಸಂದರ್ಶಕರಿಗೆ, ಮಾಹಿತಿ ಮತ್ತು ಪ್ರಾತ್ಯಕ್ಷಿಕೆಗಳನ್ನು ಎಂದಿನಂತೆ ನಡೆಸಿಕೊಂಡು ಬರಲಾಗುತ್ತಿದೆ ಹಾಗೂ ತಾರಾಲಯದ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ

**d)** ವಿಜ್ಞಾನ ಉತ್ಸವ:

ಸ್ವಾತಂತ್ರ್ಯದ ಅಮೃತ ಸಂಭ್ರಮದ ಸಲುವಾಗಿ 2022-ಫೆಬ್ರವರಿ 22 ರಿಂದ 28ರ ವರೆಗೆ ದೇಶದ 75 ಕೇಂದ್ರಗಳಲ್ಲಿ ವಿಜ್ಞಾನದ ಹಬ್ಬವನ್ನು "ವಿಜ್ಞಾನ ಪ್ರಸಾರ್" ಮಾರ್ಗದರ್ಶನದಂತೆ ಆಯೋಜಿಸಲಾಗಿತ್ತು. ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರವೂ ಈ 75 ಕೇಂದ್ರಗಳಲ್ಲೊಂದು ಈ ಬಗ್ಗೆ ವಸ್ತು ಪ್ರದರ್ಶನ, ವಿವಿಧ ವಿಷಯಗಳ ಮೇಲೆ ಗೋಷ್ಠಿಗಳು, ಸ್ಪರ್ಧೆಗಳು , ಇಸ್ರೋದ ಬಾಹ್ಯಾಕಾಶದ ಬಗ್ಗೆ "ಪ್ರದರ್ಶನ ಬಸ್", ಪುಸ್ತಕ ಪ್ರದರ್ಶನ , ವಿಜ್ಞಾನದ ಚಲನಚಿತ್ರ ಪ್ರದರ್ಶನ, ತಾರಾಲಯದಲ್ಲಿ ಖಗೋಳ ಶಾಸ್ತ್ರದ ಪ್ರದರ್ಶನಗಳು ಇತ್ಯಾದಿಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ಇಂಜಿನಿಯರಿಂಗ್ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು.

2022 ಫೆಬ್ರವರಿ 28 ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಕೇಂದ್ರ ವಿಷಯದ ಮೇಲೆ ಉಪನ್ಯಾಸ, ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು ಮತ್ತು ವಿಜ್ಞಾನ ಪ್ರಾತ್ಯಕ್ಷಿಕೆಗಳೊಡನೆ ಆಚರಿಸಲಾಯಿತು.

**e)** ಅಧ್ಯಾಪಕರಿಗೆ ವಿಜ್ಞಾನ ಮತ್ತು ಗಣಿತ ಕಾರ್ಯಾಗಾರ:

ಜಿಲ್ಲೆಯ ಪ್ರೌಢ ಶಾಲಾ ಅಧ್ಯಾಪಕರಿಗೆ ವಿಜ್ಞಾನ ಮತ್ತು ಗಣಿತದಲ್ಲಿ ಮಾರ್ಚ್ 3–4 ರಂದು ಪಠ್ಯಕ್ರಮ ಆಧಾರಿತ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಎರಡು ದಿನಗಳ ಈ ಕಾರ್ಯಾಗಾರದಲ್ಲಿ ವಿಜ್ಞಾನ ಕಲಿಕೆಯ ಪ್ರಾತ್ಯಕ್ಷಿಕೆಗಳು, ಸಂದೇಹ ಪರಿಹಾರ ಹಾಗೂ ವಸ್ತು ಪ್ರದರ್ಶನದ ವೀಕ್ಷಣೆಗೆ ಅನುವು ಮಾಡಿಕೊಡಲಾಗಿತ್ತು. ಗಣಿತದ ಕಷ್ಟದ ವಿಷಯಗಳನ್ನು ಸುಲಭವಾಗಿ ವಿವರಿಸುವ ಬಗ್ಗೆ ಹಾಗೂ ಮಾದರಿಗಳ ಮೂಲಕ ವಿಷಯವನ್ನು ಮನದಟ್ಟು ಮಾಡುವ ವಿಧಾನಗಳನ್ನು ಹೇಳಿ ಕೊಡಲಾಯಿತು.

**f)** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ:

2022 ಮಾರ್ಚ್ 8 ರಂದು ಸ್ಥಳೀಯ ಮಹಿಳಾ ಸಂಘಗಳು ಮತ್ತು ಸ್ವಯಂ ಸೇವಕರನ್ನು ಒಳಗೊಂಡು ಮಹಿಳಾ ದಿನಾಚರಣೆಯನ್ನು ಕೇಂದ್ರದಲ್ಲಿ ನಡೆಸಲಾಯಿತು. ಮಹಿಳೆಯರು ಮುಂಚೂಣಿಗೆ ಬರಲು ಬೇಕಾದ ಕೌಶಲ್ಯಗಳು , ಅವಕಾಶಗಳು , ಆರೋಗ್ಯ ಕ್ಷೇತ್ರದಲ್ಲಿ ಅವರಿಗೆ ಇರಬೇಕಾದ ಸಾಮಾನ್ಯ ಜ್ಞಾನ ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಲಾಯಿತು.

**g)** ವಿಷುವತ್ ಸಂಕ್ರಾಂತಿ:

2022 ಮಾರ್ಚ್ 20 ರಂದು ವಿಷುವತ್ ಸಂಕ್ರಾಂತಿಯ ಬಗೆಗಿನ ಅರಿವು, ಪ್ರಾಮುಖ್ಯತೆ, ಅದಕ್ಕೆ ಸಂಬಂಧಿಸಿದ ಪ್ರಾತ್ಯಕ್ಷಿಕೆಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು.

**2. ಜೈವಿಕ ಉದ್ಯಾನ**

ಪಿಲಿಕುಳದ ಜೈವಿಕ ಉದ್ಯಾನದಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

**a)** ಆನ್ ಲೈನ್ ಕಾರ್ಯಕ್ರಮಗಳು:

i. ಆಜಾದಿ ಕಾ ಅಮೃತ್ ಮಹೋತ್ಸವ್ - (ಮೇ- 2021)

ii. ವರ್ಲ್ಡ್ ವೈಲ್ಡ್ ಲೈಫ್ ವೀಕ್ (ಅಕ್ಟೋಬರ್ -2021)

**b)** ಶಿಬಿರ:

ಜೈವಿಕ ಉದ್ಯಾನದ ವತಿಯಿಂದ ದಿ:03–10–2021ರಂದು ಮೂಡುಶೆಡ್ಡೆ ಗ್ರಾಮ ಪಂಚಾಯತ್ ಕಛೇರಿ ಬಳಿ ಜಾನುವಾರುಗಳಿಗೆ ಉಚಿತ ಲಸಿಕಾ ಶಿಬಿರವನ್ನು ಏರ್ಪಡಿಸಿ ಯಶಸ್ವಿಯಾಗಿ ನಡೆಸಿದೆ.

**c)** ದಿನಾಚರಣೆ: ದಿನಾಂಕ 04–10–2021 ರಂದು ಜೈವಿಕ ಉದ್ಯಾನದಲ್ಲಿ ಝೂ ಕೀಪರ್ಸ್ ಡೇಯನ್ನು ಆಚರಿಸಲಾಗಿದೆ.

**3. ಸಂಸ್ಕೃತಿ ಗ್ರಾಮ:**

ಪಿಲಿಕುಳದ ಅರ್ಬನ್ ಹಾಥ್ ಮತ್ತು ಮಂಗಳೂರಿನಲ್ಲಿ ಕೇಂದ್ರ ಸರ್ಕಾರದ ಜವಳಿ ಮಂತ್ರಾಲಯದ ಕರಕುಶಲ ಅಭಿವೃದ್ಧಿ ಆಯುಕ್ತರ ಪ್ರಾಯೋಜಕತ್ವದಲ್ಲಿ ಈ ಕೆಳಗಿನ ಕರಕುಶಲ ಮೇಳಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ.

i. ಕ್ರಾಫ್ಟ್ ಬಜಾರ್ (ದಿ:04–03–2022 ರಿಂದ 13–03–2022)

ii. ಗಾಂಧಿ ಶಿಲ್ಪ ಬಜಾರ್ (ದಿ:14–03–2022 ರಿಂದ 23–03–2022)

iii. ಎಕ್ಸಿಬಿಷನ್ (ದಿ:24–03–2022 ರಿಂದ 02–04–2022)

ಆವಗಾಹನೆಗೆ ಮಂಡಿಸಿದೆ.

<u>ನಿರ್ಣಯ:</u> **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ 2021–22ನೇ ಸಾಲಿನಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳನ್ನು ಗಮನಿಸಲಾಯಿತು.**

<u>**ವಿಷಯ ಸಂಖ್ಯೆ 14 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ 2022–23 ನೇ ಸಾಲಿನಲ್ಲಿ ಜರಗಿಸಿದ ಕಾರ್ಯಕ್ರಮಗಳು.**</u>

**2022–23ನೇ ಸಾಲಿನಲ್ಲಿ ಈಗಾಗಲೇ ಆಯೋಜಿಸಲಾದ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ.**

**ಅ) ವಿಜ್ಞಾನ ಕೇಂದ್ರದಲ್ಲಿ ಜರಗಿದ ಕಾರ್ಯಕ್ರಮಗಳು :–**

1) ಮಕ್ಕಳ ಕಲಿಕಾ ಶಿಬಿರ – ದಿನಾಂಕ 07–04–2022
2) NPCIL Miniature Gallery Inauguration – Dtd: 22-04-2022
3) ವಿಶ್ವ ಭೂಮಿಯ ದಿನ (World Earth Day) ದಿನಾಂಕ 22–04–2022
4) ಶೂನ್ಯ ನೆರಳು ದಿನ (Zero shadow day) – ದಿನಾಂಕ 24–04–2022
5) Jupiter – Venus Conjuntion – Dtd: 01-05-2022
6) Guided tour to Gallery – Dtd: 03-05-2022
7) ವಿಶ್ವ ಪರಿಸರ ದಿನಾಚರಣೆ – ದಿನಾಂಕ 05–06–2022 ಮತ್ತು 06–06–2022

**ಆ) ಜೈವಿಕ ಉದ್ಯಾನದಲ್ಲಿ ಜರಗಿದ ಕಾರ್ಯಕ್ರಮಗಳು :-**

1) ವಿಶ್ವ ಜೇನುಗಳ (World Bee Day) ದಿನಾಚರಣೆ –ದಿನಾಂಕ 20-05-2022
2) ಅಂತರಾಷ್ಟ್ರೀಯ ಜೈವಿಕ ವೈವಿಧ್ಯತೆಯ ದಿನಾಚರಣೆ – ದಿನಾಂಕ 22-05-2022

**ಇ) ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಜರಗಿದ ಕಾರ್ಯಕ್ರಮಗಳು :-**

1) ಹಲಸು ಮೇಳ ಮತ್ತು ಹಣ್ಣುಗಳ ಹಬ್ಬ – ದಿನಾಂಕ 11-06-2022 ಮತ್ತು 12-06-2022

**ಈ) ಸಂಸ್ಕೃತಿ ಗ್ರಾಮದಲ್ಲಿ ಜರಗಿದ ಕಾರ್ಯಕ್ರಮಗಳು :-**

1) ಪಿಲಿಕುಳ ಆಟಿಕೂಟ – ದಿ: 13-08-2022 ರಂದು ಪಿಲಿಕುಳದ ಗುತ್ತುಮನೆಯಲ್ಲಿ ಜರಗಿಸಲಾಗಿದೆ.

**<u>ನಿರ್ಣಯ:</u> ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ 2022-23ನೇ ಸಾಲಿನಲ್ಲಿ ಈಗಾಗಲೇ ಆಯೋಜಿಸಲಾದ ಕಾರ್ಯಕ್ರಮಗಳನ್ನು ಗಮನಿಸಲಾಯಿತು.**

**<u>ವಿಷಯ ಸಂಖ್ಯೆ 15 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ 2022-23ನೇ ಸಾಲಿನಲ್ಲಿ ಇನ್ನು ಮುಂದೆ ಜರಗಿಸಲು ಉದ್ದೇಶಿಸಿರುವ ಕಾರ್ಯಕ್ರಮಗಳು.</u>**

1) ಮತ್ಸ್ಯಮೇಳ – ಆಗಸ್ಟ್/ಸೆಪ್ಟೆಂಬರ್-2022
2) ವಿಜ್ಞಾನ ಮೇಳ – ಸೆಪ್ಟೆಂಬರ್ -2022
3) ವನ್ಯಜೀವಿ ಸಪ್ತಾಹ – ಅಕ್ಟೋಬರ್-2022
4) ಕ್ರಾಫ್ಟ್ ಬಜಾರ್– ಅಕ್ಟೋಬರ್-2022
5) ಎಕ್ಸಿಭಿಷನ್ – ಅಕ್ಟೊಬರ್ ಮತ್ತು ಡಿಸೆಂಬರ್-2022
6) ರಾಷ್ಟ್ರೀಯ ವಿಜ್ಞಾನ ದಿನಾಚರಣೆ – 28 ಫೆಬ್ರವರಿ-2023
7) ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ – 8 ಮಾರ್ಚ್-2023

ಅವಗಾಹನೆಗೆ ಮಂಡಿಸಿದೆ.

**<u>ನಿರ್ಣಯ:</u> ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ 2022-23ನೇ ಸಾಲಿನಲ್ಲಿ ಈಗಾಗಲೇ ಜರಗಿಸಲು ಪ್ರಸ್ತಾಪಿಸಿರುವ ಕಾರ್ಯಕ್ರಮಗಳೊಂದಿಗೆ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಗತ್ಯ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.**

**1) ಪಿಲಿಕುಳ ಕಂಬಳ – ಡಿಸೆಂಬರ್-2022 ರಲ್ಲಿ ಕಂಬಳವನ್ನು ಅನುಷ್ಠಾನಿಸಲು ಸೂಕ್ತ ಕ್ರಮ ಜರಗಿಸುವುದು. ಈ ಕುರಿತು ಅನುದಾನಕ್ಕಾಗಿ ಅಗತ್ಯ ಪ್ರಸ್ತಾವನೆಯನ್ನು ಮಾನ್ಯ ಮೂಡಬಿದ್ರೆ ಶಾಸಕರ ಮುಖಾಂತರ ಸರಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.**

**2) ಗುತ್ತುಮನೆಯಲ್ಲಿ ವಾರಾಂತ್ಯದಲ್ಲಿ ಪಿಲಿನಲಿಕೆ, ಯಕ್ಷಗಾನ, ಕಂಗೀಲು ನೃತ್ಯ ವಿವಿಧ ಜನಪದ ಕಾರ್ಯಕ್ರಮಗಳನ್ನು ಆಯೋಜಿಸಲು ರೂಪುರೇಷೆ ಸಿದ್ಧಪಡಿಸಲು ತೀರ್ಮಾನಿಸಲಾಯಿತು.**

**<u>ವಿಷಯ ಸಂಖ್ಯೆ 16 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರವೇಶ ಶುಲ್ಕವನ್ನು ಹೆಚ್ಚಿಸುವ ಕುರಿತು.</u>**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಎಲ್ಲಾ ಆಕರ್ಷಣೆಗಳಿಗೆ ಪ್ರವೇಶ ಶುಲ್ಕವನ್ನು ಈ ಹಿಂದೆ 01-01-2021 ರಿಂದ ಈ ಕೆಳಕಾಣಿಸಿದಂತೆ ಪರಿಷ್ಕರಿಸಲಾಗಿದೆ.

ಪ್ರತಿ ಮಾಹೆಯಲ್ಲಿ ಸಿಬ್ಬಂದಿ ವೇತನ ಪ್ರಾಣಿಗಳ ಆಹಾರ, ಸ್ವಚ್ಛತೆ, ಭದ್ರತಾ ವ್ಯವಸ್ಥೆ, ತೋಟದ ನಿರ್ವಹಣೆ ಹಾಗೂ ಇತರೆ ನಿರ್ವಹಣಾ ಕೆಲಸಗಳಿಗೆ ಅಂದಾಜು ರೂ.70.00 ಲಕ್ಷ ಬೇಕಾಗುತ್ತದೆ. ಸರಕಾರದಿಂದ

ಬರುವ ಅನುದಾನ ಹಾಗೂ ಪ್ರವೇಶ ಶುಲ್ಕ ಮತ್ತಿತರ ಆದಾಯವನ್ನು ಸೇರಿಸಿಕೊಂಡು ವೆಚ್ಚವನ್ನು ಸರಿದೂಗಿಸಿಕೊಂಡು ಹೋಗುವುದು ಕಷ್ಟಸಾಧ್ಯವಾಗಿದೆ. ಆದ್ದರಿಂದ ಹಾಲಿ ಇರುವ ಪ್ರವೇಶ ಶುಲ್ಕವನ್ನು ಪರಿಷ್ಕರಿಸುವ ಅಗತ್ಯ ಕಂಡುಬರುತ್ತದೆ.

ಪ್ರಸ್ತುತ ಇರುವ ಪ್ರವೇಶ ಶುಲ್ಕದ ವಿವರ

| Attraction/Division | Adults (above 10 Years) (Rs.) | Proposed Fee (Rs.) | Children (3 to 10 Years) (Rs.) | Proposed Fee (Rs.) |
|---|---|---|---|---|
| Mega Combo | 200 | **250** | 150 | **200.00** |
| 3D Planetarium | 80 | **100** | 60 | **80** |
| Combo (All attraction except Planetarium) | 150 | **200** | 100 | **150** |
| Biological Park (Zoo) | 70 | **100** | 40 | **50** |
| Lake Garden | 30 | **50** | 20 | **30** |
| Heritage Village / Guthu House | 60 | **75** | 30 | **40** |
| Regional Science Centre | 30 | **50** | 20 | **30** |
| 3D Theater (Regional Science Centre) | 15 | **30** | 10 | **15** |
| Botanical Garden & Museum | 50 | **75** | 20 | **30** |
| Buggies (BOC) | 30 | **50** | 15 | **30** |
| | | | | |
| Camera | 150 | **200** | - | - |
| Video Camera | 500 | **750** | - | - |
| Dressing Room (At Lake Garden) | 120 | **200** | - | - |

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಬೇಟಿ ನೀಡಿದ ಪ್ರವಾಸಿಗರ ಸಂಖ್ಯೆ ಮತ್ತು ಪ್ರವೇಶ ಶುಲ್ಕದ ವಿವರ ಈ ಕೆಳಕಾಣಿಸಿದಂತಿದೆ.

| Sl. No | Year (April to March) | Visitors Details | | | Amount collected from entry fee |
|---|---|---|---|---|---|
| | | Adults | Child | Total | (Rs.) |
| 1 | 2019-20 | 3,52,109 | 1,39,964 | **4,92,073** | **3,07,50,425** |
| 2 | 2020-21 | 1,32,708 | 32,834 | **1,65,542** | **1,08,87,636** |
| 3 | 2021-22 | 2,12,253 | 30,483 | **2,42,736** | **1,77,18,765** |
| 4 | 2022-23 (upto June-22) | 1,13,451 | 22,853 | **1,36,304** | **1,01,06,185** |

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ 2019-20 ನೇ ಸಾಲಿನಲ್ಲಿ ಸಂದರ್ಶಿಸಿದ ಪ್ರವಾಸಿಗರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡಲ್ಲಿ ಪ್ರಸಕ್ತ ವರ್ಷ (2022-23) ನೇ ಸಾಲಿನಲ್ಲಿ ಮೇಲ್ಕಾಣಿಸಿದಂತೆ ಪ್ರವೇಶ ಶುಲ್ಕವನ್ನು ಪರಿಷ್ಕರಿಸಿದಲ್ಲಿ ಬರುವ ಆದಾಯದ ಅಂದಾಜು ಮೊತ್ತ ಈ ಕೆಳಕಂಡಂತಿದೆ.

| ಕ್ರ.ಸಂ. | ವರ್ಷ | ಪ್ರವಾಸಿಗರ ಸಂಖ್ಯೆ | ಮೊತ್ತ ರೂ. | ಹೆಚ್ಚುವರಿಯಾಗಿ ಬರಬಹುದಾದ ಆದಾಯ |
|---|---|---|---|---|
| 1 | 2019-20 | 4,92,073 | 3,07,50,425 | - |
| 2 | **2022-23** | **4,92,073** | **4,32,98,565** | **1,25,48,140** |

ಪ್ರಸ್ತುತ ನಿರ್ವಹಣಾ ಮಾರುಕಟ್ಟೆ ದರಗಳು ದುಬಾರಿಯಾಗಿರುತ್ತದೆ. ಆದ್ದರಿಂದ ಪ್ರವೇಶ ಶುಲ್ಕವನ್ನು ಹೆಚ್ಚಿಸುವ ಕುರಿತು ಚರ್ಚೆ ಮತ್ತು ನಿರ್ಧಾರ.

**<u>ನಿರ್ಣಯ:</u> ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಎಲ್ಲಾ ಆಕರ್ಷಣೆಗಳಿಗೆ ಪ್ರವೇಶ ಶುಲ್ಕವನ್ನು ಈ ಕೆಳಕಾಣಿಸಿದಂತೆ ಪರಿಷ್ಕರಿಸಲು ತೀರ್ಮಾನಿಸಲಾಯಿತು.**

**ದಿನಾಂಕ 01.10.2022 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿದ ಪ್ರವೇಶ ಶುಲ್ಕದ ವಿವರ**

| Attractions/Division | Adults (above 10 Years) (Rs.) | Approved Revised Fee (Rs.) | Children (3 to 10 Years) (Rs.) | Approved Revised Fee (Rs.) |
|---|---|---|---|---|
| Mega Combo | 200 | 220 | 150 | 160 |
| 3D Planetarium | 80 | 90 | 60 | 70 |
| Combo (All attraction except Planetarium) | 150 | 170 | 100 | 120 |
| Biological Park (Zoo) | 70 | 80 | 40 | 50 |
| Lake Garden | 30 | 50 | 20 | 30 |
| Heritage Village / Guthu House | 60 | 70 | 30 | 40 |
| Regional Science Centre | 30 | 40 | 20 | 30 |
| 3D Theater (Regional Science Centre) | 15 | 20 | 10 | 15 |
| Botanical Garden & Museum | 50 | 60 | 20 | 30 |
| Buggies (BOC) | 30 | 40 | 15 | 20 |
| | | | | |
| Camera | 150 | 170 | - | - |
| Video Camera | 500 | 500 | - | - |
| Dressing Room (At Lake Garden) | 120 | 140 | - | - |

<u>ವಿಷಯ ಸಂಖ್ಯೆ 17 : ಅಧಿಕಾರಿ/ಸಿಬ್ಬಂದಿಗಳ ತುಟ್ಟಿಭತ್ಯೆ(DA)ಯನ್ನು ಪರಿಷ್ಕರಿಸಿ ನೀಡುವ ಕುರಿತು.</u>

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ತುಟ್ಟಿಭತ್ಯೆಯನ್ನು 4 ವರ್ಷಗಳ ಹಿಂದೆ ಅಂದರೆ 1-4-2018 ರಲ್ಲಿ ಖಾಯಂ ಸಿಬ್ಬಂದಿಗಳಿಗೆ 10% ರಂತೆ ಹಾಗೂ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳಿಗೆ 5% ರಂತೆ ಪರಿಷ್ಕರಿಸಿದ್ದು, ತದನಂತರ ಕೋವಿಡ್‌ನಿಂದಾಗಿ ಆರ್ಥಿಕ ತೊಂದರೆ ಉಂಟಾದ ಕಾರಣದಿಂದ ತುಟ್ಟಿಭತ್ಯೆಯನ್ನು ಹೆಚ್ಚಿಸಿರುವುದಿಲ್ಲ. ಪ್ರಾಧಿಕಾರದ ಸಿಬ್ಬಂದಿ ಹುದ್ದೆಗಳ ಸೃಜನೆ, ವೇತನ ನಿಗಧಿ ಇತ್ಯಾದಿಗಳಿಗೆ ಇನ್ನೂ ಹೆಚ್ಚಿನ ಕಾಲಾವಕಾಶ ಇರುವುದರಿಂದ ಹಾಗೂ ಪ್ರಸ್ತುತ ಮಾರುಕಟ್ಟೆಯಲ್ಲಿ ಎಲ್ಲಾ ದರಗಳು ದುಬಾರಿಯಾಗಿರುವುದರಿಂದ ಸಿಬ್ಬಂದಿಗಳಿಗೆ ತುಟ್ಟಿಭತ್ಯೆಯನ್ನು ಹೆಚ್ಚಿಸುವ ವಿಚಾರದ ಕುರಿತು ನಿರ್ಧಾರಕ್ಕಾಗಿ ಮಂಡಿಸಿದೆ.

**<u>ನಿರ್ಣಯ:</u> ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ತುಟ್ಟಿಭತ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

**<u>ವಿಷಯ ಸಂಖ್ಯೆ 18 : ನಿವೃತ್ತ ಅಧಿಕಾರಿ/ಸಿಬ್ಬಂದಿಗಳ ಗುತ್ತಿಗೆ ಅವಧಿಯನ್ನು ಮುಂದುವರಿಸುವ ಕುರಿತು.</u>**

ಹಿಂದಿನ ಪಿಲಿಕುಳ ನಿಸರ್ಗಧಾಮದ ದಿನಾಂಕ 17.12.2018 ರಲ್ಲಿ ಜರಗಿದ ಕಾರ್ಯಕಾರಿ ಮಂಡಳಿ ಸಭೆಯ ನಿರ್ಣಯ ಸಂಖ್ಯೆ 11 ರಂತೆ ಗುತ್ತಿಗೆ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಳಕಾಣಿಸಿದ ನಿವೃತ್ತ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಕಾರ್ಯರೂಪಕ್ಕೆ ಬರುವವರೆಗೆ ಮುಂದುವರಿಸುವುದು ಎಂದು ತೀರ್ಮಾನಿಸಲಾಗಿದೆ.

| ಕ್ರ. ಸಂ. | ಹೆಸರು | ಪದನಾಮ | ಮಾಸಿಕ ವೇತನ ರೂ. | ಕರ್ತವ್ಯಕ್ಕೆ ಸೇರಿದ ದಿನಾಂಕ |
|---|---|---|---|---|
| 1 | ಶ್ರೀ ಹೆಚ್. ಜಯಪ್ರಕಾಶ್ ಭಂಡಾರಿ | ನಿರ್ದೇಶಕರು, ಜೈವಿಕ ಉದ್ಯಾನವನ | 43,796 | 01-05-2004 |
| 2 | ಡಾ. ಕೆ.ವಿ. ರಾವ್ | ನಿರ್ದೇಶಕರು, ಪ್ರಾದೇಶಿಕ ವಿಜ್ಞಾನ ಕೇಂದ್ರ | 37,796 | 01-11-2002 |
| 3 | ಶ್ರೀ ಬಾಬು ದೇವಾಡಿಗ | ಆಡಳಿತ ಅಧಿಕಾರಿ | 28,848 | 01-05-2015 |
| 4 | ಶ್ರೀ ಉದಯಕುಮಾರ್ ಶೆಟ್ಟಿ | ತೋಟಗಾರಿಕಾ ಮೇಲ್ವಿಚಾರಕರು | 13,155 | 04-07-2015 |
| 5 | ಶ್ರೀ ಲಿಂಗಪ್ಪಯ್ಯ | ಮೇಲ್ವಿಚಾರಕರು, ಜೈವಿಕ ಉದ್ಯಾನವನ | 15,721 | 22-09-2015 |
| 6 | ಶ್ರೀ ನಾಗೇಶ್ ಕುಲಾಲ್ | ಅಕ್ವೇರಿಯಂ ನಿರ್ವಾಹಕರು | 12,562 | 01-01-2016 |

ಈಗ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತಿದ್ದು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ಕಲಂ 17 ರಂತೆ ಪ್ರಾಧಿಕಾರಕ್ಕೆ ಅವಶ್ಯವಿರುವ ಸಂಖ್ಯೆಯ ನೌಕರರನ್ನು ಸರಕಾರದಿಂದ ಮಂಜೂರಾತಿ ಪಡೆದು ನೇಮಿಸಬೇಕೆಂದಿರುತ್ತದೆ.

ಆದಾಗ್ಯೂ ಈ ಅಧಿನಿಯಮದ ಅಡಿಯಲ್ಲಿ ನೇಮಕಾತಿ ನಿಯಮಗಳನ್ನು ನಿಯಮಿಸುವವರೆಗೆ ಈಗ ಇರುವ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು ಮುಂದುವರಿಯತಕ್ಕದೆಂದು ತಿಳಿಸಲಾಗಿದೆ.

ಮೇಲೆ ತಿಳಿಸಿದ ನಿವೃತ್ತ ಅಧಿಕಾರಿ/ಸಿಬ್ಬಂದಿಗಳು ಕಳೆದ ಹಲವಾರು ವರ್ಷಗಳಿಂದ ಇಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಅವರ ಪರಿಣತಿಯು ಈಗ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವಾಗಿ ಪರಿವರ್ತನೆ ಹೊಂದುವ ವೇಳೆ ಅವಶ್ಯವಿರುವುದರಿಂದ ಮುಂದಿನ ಆದೇಶದವರೆಗೆ ನಿವೃತ್ತ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಯಥಾಸ್ಥಿತಿಯಲ್ಲಿ ತಾತ್ಕಾಲಿಕ ನೆಲೆಯಲ್ಲಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 17ರ ಅಡಿಯಲ್ಲಿ ಸರಕಾರವು ನಿಯಮಗಳನ್ನು ರೂಪಿಸುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಬರುತ್ತದೊ ಅಲ್ಲಿಯವರೆಗೆ ಮುಂದುವರಿಸುವ ಬಗ್ಗೆ ನಿರ್ಧಾರಕ್ಕಾಗಿ ಮಂಡಿಸಿದೆ.

**<u>ನಿರ್ಣಯ:</u> ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಅಗತ್ಯವಿರುವ ಅಧಿಕಾರಿ/ಸಿಬ್ಬಂದಿ ಹುದ್ದೆಗಳು ಮಂಜೂರಾಗಿ ಸೃಜನೆಯಾಗುವವರೆಗೆ ನುರಿತ, ಅನುಭವಿ ಅಧಿಕಾರಿ/ಸಿಬ್ಬಂದಿ ಸೇವೆಯ ಅವಶ್ಯಕತೆ ಇರುವುದರಿಂದ ಹಂತ ಹಂತವಾಗಿ ಈಗ ಸಂಚಿತ ವೇತನದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಕಡಿತಗೊಳಿಸುವ ಬಗ್ಗೆ ಹಾಗೂ ಅವಶ್ಯಕತೆ ಇದ್ದಲ್ಲಿ ಬದಲಿ ನುರಿತ ಅಧಿಕಾರಿ/ಸಿಬ್ಬಂದಿಯನ್ನು ಗುತ್ತಿಗೆ ಆಧಾರದಲ್ಲಿ ಸಂಚಿತ ವೇತನದಲ್ಲಿ ನಿಯಮಾನುಸಾರ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಜಾಹಿರಾತು ಪ್ರಕಟಿಸುವ ಬಗ್ಗೆ ಕ್ರಮವಹಿಸಲು ನಿರ್ಣಯಿಸಲಾಯಿತು.**

**ವಿಷಯ ಸಂಖ್ಯೆ 19 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವಾ ಅವಧಿಯನ್ನು ವಿಸ್ತರಿಸುವ ವಿಚಾರದ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವಾ ಅವಧಿಯು ಅವರುಗಳ ಹೆಸರಿನ ಮುಂದೆ ಕಾಣಿಸಿದ ದಿನಾಂಕದಂದು ಮುಕ್ತಾಯಗೊಂಡಿರುತ್ತದೆ.

| ಕ್ರ. ಸಂ. | ಹೆಸರು | ಹುದ್ದೆ | ಕರ್ತವ್ಯಕ್ಕೆ ಸೇರಿದ ದಿನಾಂಕ | ಮುಕ್ತಾಯಗೊಂಡ ದಿನಾಂಕ |
|---|---|---|---|---|
| 1 | ಶ್ರೀ ಹರೀಶ ಪಿ. | ವೆಟರಿನರಿ ಸಹಾಯಕರು | 6.08.2019 | 5.08.2020 |
| 2 | ಶ್ರೀ ಅಶೋಕ ಬಿ. | ಪ್ರಾಣಿಪರಿಪಾಲಕರು | 10.08.2019 | 9.08.2020 |
| 3 | ಶ್ರೀ ಜಯಗೌಡ | ಪ್ರಾಣಿಪರಿಪಾಲಕರು | 6.08.2019 | 22.12.2020 |

ಮೇಲ್ಕಾಣಿಸಿದ ಸಿಬ್ಬಂದಿಗಳ ಸೇವೆಯ ಅಗತ್ಯತೆಯಿಂದಾಗಿ ಸಂಚಿತ ವೇತನದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಈವರೆಗೆ ಮುಂದುವರಿಸಿಕೊಂಡು ಬರಲಾಗಿದೆ.

ಆದ್ದರಿಂದ, ಅವರುಗಳ ಸೇವಾ ಅವಧಿ ಮುಕ್ತಾಯಗೊಂಡ ದಿನಾಂಕದಿಂದ ಈವರೆಗೆ ಮುಂದುವರಿಸಿಕೊಂಡು ಬಂದಿರುವ ಕ್ರಮವನ್ನು ಅನುಮೋದಿಸುವ ಕುರಿತು ಹಾಗೂ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 17ರ ಅಡಿಯಲ್ಲಿ ಸರಕಾರವು ನಿಯಮಗಳನ್ನು ರೂಪಿಸುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಬರುತ್ತದೊ ಅಲ್ಲಿಯವರೆಗೆ ಮುಂದುವರಿಸುವ ಕುರಿತು ಚರ್ಚೆ ಮತ್ತು ನಿರ್ಧಾರ.

<u>ನಿರ್ಣಯ:</u> **ಸೇವಾವಧಿ ಮುಕ್ತಾಯಗೊಂಡ ಮೇಲಿನ ಗುತ್ತಿಗೆ ಸಿಬ್ಬಂದಿಯವರ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ 20 : ಕರ್ನಾಟಕ ವಿಧಾನ ಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ತೀರ್ಮಾನ ಅನುಸರಿಸಿ ಪಿಲಿಕುಳ ಗಾಲ್ಫ್‌ಕ್ಲಬ್‌ಗೆ ನೀಡಿರುವ ನೋಟೀಸಿನ ಕುರಿತು.**

ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ಮತ್ತು ಪರಿಸರವನ್ನು ಸಂರಕ್ಷಿಸಲು ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದ ಸೊಸೈಟಿಯಾಗಿರುವ ಡಾ.ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮಕ್ಕೆ ಹಿಂದೆ ಮೂಡುಶೆಡ್ಡೆ ಮತ್ತು ತಿರುವೈಲು ಗ್ರಾಮಗಳಲ್ಲಿ 341.46 ಎಕರೆ ಭೂಮಿಯನ್ನು ಸರ್ಕಾರವು ಗುತ್ತಿಗೆ ನೆಲೆಯಲ್ಲಿ ನೀಡಿದೆ. ಈ ಪೈಕಿ 53.65 ಎಕರೆ (ಎಂ.ಒ.ಯು.ಪ್ರಕಾರ 72.00 ಎಕರೆ) ಭೂಮಿಯನ್ನು ಪಿಲಿಕುಳ ಗಾಲ್ಫ್‌ಕ್ಲಬ್‌ಗೆ ದಿನಾಂಕ 14.3.2002 ರ ಮೆಮೊರ್‍ಯಾಂಡಂ ಆಫ್ ಅಂಡರ್‌ಸ್ಟ್ಯಾಂಡಿಂಗ್ ಪ್ರಕಾರ ಗಾಲ್ಫ್ ಆಟ ಆಡಲು ಮತ್ತು ಗಾಲ್ಫ್‌ಕ್ರೀಡೆಯ ಅಭಿವೃದ್ಧಿಗೆ ಮಾತ್ರ ನೀಡಲಾಗಿದೆ. ಕಂದಾಯ ದಾಖಲೆಗಳಲ್ಲಿ ಪಿಲಿಕುಳ ನಿಸರ್ಗಧಾಮದ ಹೆಸರನ್ನೇ ಉಳಿಸಿಕೊಂಡು ಬರಲಾಗಿದೆ. ಗಾಲ್ಫ್‌ಕ್ಲಬ್‌ಗೆ ನೀಡಿರುವ ಭೂಮಿಯು ವರ್ಗಾವಣೆಯನ್ನು ಉಪಗುತ್ತಿಗೆಯೆಂದು ಪರಿಗಣಿಸದೆ ಜಿಲ್ಲಾಧಿಕಾರಿಯವರು ಅನಧಿಕೃತವಾಗಿ ಪರಾಭಾರೆ ಮಾಡಿದ್ದರು ಮತ್ತು ಪ್ರವಾಸೋದ್ಯಮ ಮತ್ತು ಗಾಲ್ಫ್‌ನ್ನು ಅಭಿವೃದ್ಧಿಗೊಳಿಸುವುದು ಸರಕಾರದ ಉದ್ದೇಶವಾಗಿದ್ದರೆ ಅದರ ಮಾರುಕಟ್ಟೆ ಮೌಲ್ಯವನ್ನು ಸಂಗ್ರಹಿಸಿ ಗಾಲ್ಫ್‌ಕ್ಲಬ್‌ಗೆ ಭೂಮಿಯನ್ನು ಕರ್ನಾಟಕ ಭೂಮಂಜೂರಾತಿ ನಿಯಮಗಳಂತೆ ಮಂಜೂರು ಮಾಡಬೇಕಿತ್ತು ಎಂಬುದಾಗಿ ಮಹಾಲೇಖಪಾಲರು ಎತ್ತಿರುವ ಆಕ್ಷೇಪಣೆಗಳಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಈ ಆಕ್ಷೇಪಣಾ ಕಂಡಿಕೆಯ ಬಗ್ಗೆ ಅಂತಿಮವಾಗಿ ದಿ:28.6.2022 ರಂದು ಸುಧೀರ್ಘವಾಗಿ ತನಿಖೆ ನಡೆಸಿ ದಿ:14.3.2022 ರಂದು ಪಿಲಿಕುಳ ಗಾಲ್ಫ್‌ಕ್ಲಬ್‌ನೊಂದಿಗೆ ಮಾಡಿಕೊಂಡಿರುವ ಎಂ.ಒ.ಯು. ನ್ನು ರದ್ದುಪಡಿಸಿಕೊಂಡು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದಲೇ ಜನಸಾಮಾನ್ಯರಿಗೆ ಉಪಯೋಗವಾಗುವ ಹಾಗೆ ಗಾಲ್ಫ್ ಆಟವನ್ನು ನಡೆಸಲು ಹಾಗೂ ಈ ಪ್ರಕ್ರಿಯೆಯನ್ನು ಮುಂದಿನ 2 ತಿಂಗಳೊಳಗೆ ಪೂರೈಸಿ ಪಾಲನಾ ವರದಿಯನ್ನು ಸಲ್ಲಿಸಲು ಆದೇಶಿಸಿದೆ.

ಈ ಕುರಿತಂತೆ ಗಾಲ್ಫ್‌ಕ್ಲಬ್‌ಗೆ ದಿ:22.7.2022 ರಂದು ನೋಟೀಸು ನೀಡಿ ದಿ:14.3.2002 ರಂದು ಮಾಡಿಕೊಂಡಿರುವ ಎಂ.ಒ.ಯು.ನ್ನು ರದ್ದುಪಡಿಸಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಗೆ ಗಾಲ್ಫ್‌ನ್ನು ಒಳಪಡಿಸಲಾಗುವುದೆಂದು ತಿಳಿಸಲಾಗಿತ್ತು.

ಈ ನೋಟೀಸಿಗೆ ಉತ್ತರವಾಗಿ ದಿ:28.7.2022 ರಂದು ಪ್ರಾಧಿಕಾರದಿಂದ ನೀಡಿರುವ ನೋಟೀಸನ್ನು ಹಿಂಪಡೆದು ಬದಲಿಗೆ ಗಾಲ್ಫ್‌ಕ್ಲಬ್ ವತಿಯಿಂದ ಯುಕ್ತವರಮಾನವನ್ನು ಕೊಡುವ ಬಗ್ಗೆ ಮಾತುಕತೆ ಮಾಡಿ ನಿಗಧಿಪಡಿಸಿಕೊಂಡು ಗಾಲ್ಫ್‌ಕ್ಲಬ್‌ನ್ನು ಪ್ರಾಧಿಕಾರದ ಅಡಿಯಲ್ಲಿ ಮುಂದುವರಿಸಲು ಆದೇಶಿಸಬೇಕೆಂದು ಕೋರಿರುತ್ತಾರೆ.

ಈ ವಿಚಾರವನ್ನು ಪ್ರಾಧಿಕಾರದ ಅವಗಾಹನೆಗೆ ಒಪ್ಪಿಸಿದೆ.

**ನಿರ್ಣಯ: ಪಿಲಿಕುಳ ಗಾಲ್ಫ್‌ಕ್ಲಬ್ ಕುರಿತು ಸೂಕ್ತ ನಿರ್ಣಯ ಕೈಗೊಳ್ಳಲು ಪ್ರಾಧಿಕಾರದ ಅಧ್ಯಕ್ಷರಿಗೆ ವಿಶೇಷ ಅಧಿಕಾರ ನೀಡಲು ನಿರ್ಣಯಿಸಲಾಯಿತು.**

**ವಿಷಯ ಸಂಖ್ಯೆ 21 : ಸರ್ಕಾರದ ಹಂತದಲ್ಲಿ ಬಾಕಿ ಇರುವ ಪ್ರಸ್ತಾವನೆಗಳ ವಿವರ:**

| ಕ್ರ. ಸಂ | ವಿವರ | ಪತ್ರ ಸಂಖ್ಯೆ ಮತ್ತು ದಿನಾಂಕ | ಯಾರಿಗೆ ಸಲ್ಲಿಸಿರುವುದು | ಅನುದಾನ (ರೂ ಲಕ್ಷಗಳಲ್ಲಿ) | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಕೋವಿಡ್ 19 ಪರಿಹಾರ ಅನುದಾನ | ಪಿಡಿಎ(1).ಸಿಆರ್/124/ ಪರಿಹಾರ/2021–22, ದಿ: 31.08.2021 | ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್, ಬೆಂಗಳೂರು | 466.00 | ಸರ್ಕಾರದ ಪತ್ರ ಸಂಖ್ಯೆ ಐಟಿಬಿಟಿ 31/ಎಸ್‌ಟಿಎಸ್/2020, ದಿ:03–12–2021 ರ ಪತ್ರದಲ್ಲಿ ಕೇಳಿರುವಂತೆ 5 ವರ್ಷದ ಅಡಿಟ್ ವರದಿಯನ್ನು ದಿನಾಂಕ 15–12–2021 ರ ಪತ್ರದಲ್ಲಿ ಸಲ್ಲಿಸಲಾಗಿದೆ. ಅನುದಾನ ಮಂಜೂರು ಆಗಿರುವುದಿಲ್ಲ. |
| 2 | 2022–23 ನೇ ಸಾಲಿನ ಹೊಸ ಯೋಜನೆಗೆ ಅನುದಾನ ಕೋರಿ | ಪಿಡಿಎ(1).ಸಿಆರ್/192/ಕ್ರಿಯಾ ಯೋಜನೆ/ 2021–22, ದಿ:27.12.2021 | ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್, ಬೆಂಗಳೂರು | 2773.00 | ಪ್ರಾಧಿಕಾರದಲ್ಲಿ ಹೊಸ ಕಾಮಗಾರಿಗಳ ಯೋಜನೆಯನ್ನು ಕೈಗೆತ್ತಿಕೊಳ್ಳಲು ವಿಶೇಷ ಅನುದಾನ ಕೋರಿರುವುದು. |
| 3 | Proposal for Financial Assistance of up gradation of gallery – PRSC | ಪಿಡಿಎ(2).ಸಿಆರ್. 63/2021–22, ದಿ :07.12.2021 | ನಿರ್ದೇಶಕರು (ತಾಂತ್ರಿಕ) ಎಲೆಕ್ಟ್ರಾನಿಕ್ಸ್, ಐಟಿಬಿಟಿ, ಎಸ್ ಆಂಡ್ ಟಿ, ಬೆಂಗಳೂರು | 500.00 | ಪ್ರಾದೇಶಿಕ ವಿಜ್ಞಾನ ಕೇಂದ್ರದ ಗ್ಯಾಲರಿಗಳ ಉನ್ನತೀಕರಣಕ್ಕೆ ಅನುದಾನ ಕೋರಿರುವುದು. |
| 4 | Proposal for Financial Assistance for Swami Vivekananda Planetarium Gallery | ಪಿಡಿಎ(2).ಸಿಆರ್. 63/2021–22, ದಿ:07.12.2021 | ನಿರ್ದೇಶಕರು (ತಾಂತ್ರಿಕ) ಎಲೆಕ್ಟ್ರಾನಿಕ್ಸ್, ಐಟಿಬಿಟಿ, ಎಸ್ ಆಂಡ್ ಟಿ, ಬೆಂಗಳೂರು | 970.00 | ತಾರಾಲಯದ ಗ್ಯಾಲರಿಗಳ ಸ್ಥಾಪನೆಗೆ ಅನುದಾನ ಕೋರಿರುವುದು. |

| | | | | | |
|---|---|---|---|---|---|
| 5 | ಸಂಸ್ಕೃತಿ ಗ್ರಾಮದ ಕಂಬಳ, ಗುತ್ತುಮನೆ ಹಾಗೂ ಮೂಲ ಸೌಲಭ್ಯದ ಅಭಿವೃದ್ಧಿ | ಪಿಡಿಎ(1).ಸಿಆರ್/ 299/2021-22 ದಿ:26.04.2022 | ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ | 560.00 | ಕಂಬಳ ಗದ್ದೆಯನ್ನು ಪುನರ್‌ಸ್ಥಾಪಿಸಿ ಗುತ್ತಿನ ಮನೆಯ ಪೈಂಟಿಂಗ್ ಹಾಗೂ ದುರಸ್ಥಿ ಮತ್ತು ಕುಶಲಕರ್ಮಿಗ್ರಾಮದ ಕುಟೀರಗಳನ್ನು ಪುನರ್ ಸ್ಥಾಪನಗೊಳಿಸಲು ಅನುದಾನ ಕೋರಿಕೆ. |
| 6 | Project Proposal on Improvement of Infrastructure Facilities Ex-situ Conservation of Plants of W.Ghats | PDA/(Bot) CR:04/Arboretum/2022-23 dt.26.04.2022 | Director, Tourisam Department | 287.50 | ಪ್ರವಾಸೋದ್ಯಮ ಇಲಾಖೆಗೆ ಪತ್ರ ಬರೆಯಲಾಗಿದೆ. |
| 7 | ಸಂಸ್ಕೃತಿ ಕಂಬಳ ಗದ್ದೆಯಲ್ಲಿ ಕಂಬಳ ನಡೆಸಲು ಅನುದಾನ ಕೋರಿ | ಪಿಡಿಎ(1).ಸಿಆರ್/ 217/ಕಂಬಳ/2021-22, ದಿ;29-12-2022 | 1. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ<br>2. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ<br>3. ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ | 15.00 | ಪ್ರಾಯೋಗಿಕ ಕಂಬಳ ಏರ್ಪಡಿಸುವ ಬಗ್ಗೆ ಅನುದಾನ ಕೋರಿಕೆ. |
| 8 | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕ್ರೂಸ್ ಪ್ರವಾಸೋದ್ಯಮವನ್ನು ಉತ್ತೇಜಿಸಲು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಅನುದಾನ ಕೋರಿ | ಪಿಡಿಎ (1):ವಿವ:ಸಿಆರ್ /75/ಕ್ರೂಸ್ /2021-22, ದಿ:24-09-2021 | ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ | 150.00 | ಕುಶಲಕರ್ಮಿ ಗ್ರಾಮದಲ್ಲಿ ಕ್ರೂಸ್ ಪ್ರವಾಸೋದ್ಯಮ ಉತ್ತೇಜಿಸಲು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಕೋರಿಕೆ. |
| 9 | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಜಾನಪದ ಲೋಕ ಸ್ಥಾಪನೆಗೆ ಅನುದಾನ ಬಿಡುಗಡೆ ಕೋರಿ | ಪಿನಿದಾ.ವಿವ.74/ ಜಾನಪದ ಲೋಕ /2011-12, ದಿ:14-09-2018 | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಮಂಜೂರಿ -498.00<br>ಬಿಡುಗಡೆ – 149.40 | ಬಿಡುಗಡೆಯಾದ ರೂ. 149.40 ಲಕ್ಷ ಮೊಬಲಗಿನಲ್ಲಿ ರೂ. 146 ಲಕ್ಷ ಮೊಬಲಗನ್ನು ವೆಚ್ಚ ಮಾಡಿದೆ. ರೂ. 145.26 ಲಕ್ಷ ಮೊಬಲಗಿಗೆ ದಿನಾಂಕ 14.9.2018 ರಂದು ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿದೆ. ಉಳಿಕೆ ಮೊಬಲಗನ್ನು ಬಿಡುಗಡೆ ಮಾಡಲು ಪತ್ರ ಬರೆಯಲಾಗಿದೆ. ಬಿಡುಗಡೆ ಯಾಗಿರುವುದಿಲ್ಲ. |

| | | | | | |
|---|---|---|---|---|---|
| 10 | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಅರ್ಬನ್ ಇಕೋ ಪಾರ್ಕ್ ಸ್ಥಾಪನೆಗೆ ಅನುದಾನ ಬಿಡುಗಡೆ ಕೋರಿ | ಪಿಎನ್‌ಡಿ.ಸಿಆರ್/59/ ಯುಇಪಿ/2013-14, ದಿ:10-03-2021 | ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು | ಮಂಜೂರಿ -1760.00<br>ಬಿಡುಗಡೆ - 500.00 | ರೂ. 5.42 ಕೋಟಿ ಮೊಬಲಗಿಗೆ ಬಳಕೆ ಪ್ರಮಾಣಪತ್ರವನ್ನು ದಿ: 16.3.2020 ರಂದು ಸಲ್ಲಿಸಿದೆ. ಉಳಿಕೆ ಮೊಬಲಗನ್ನು ಬಿಡುಗಡೆಗೊಳಿಸಲು ಮಂಡಳಿಗೆ ಪತ್ರವನ್ನು ಬರೆಯಲಾಗಿದೆ. ಆದರೆ, ಬಿಡುಗಡೆಯಾಗಿರುವುದಿಲ್ಲ |
| 11 | Financial Assistance to Improve Infrastructure facilities of Botanic Gardens, Botanical Sections of Popular Gardens and Centres of Ex-situ Conservation and Propagation of Rare, Endangered and Threatened Plants, and Plants Endemic to the Region<br>A Project proposal for Recognition of Lead Botanic Garden of Pilikula Development Authority, Mangalore | MoEFF & CC, GOI (2013-2014)<br>5 Years<br>16.11.2013 | | ಪ್ರಸ್ತಾವನೆ ಸಲ್ಲಿಸಿಕೆ.- 110.00 | ರೂ. 95.00 ಲಕ್ಷ ಮಂಜೂರಾಗಿದೆ. ಆದರೆ ಮೊಬಲಗು ಬಿಡುಗಡೆಯಾಗಿರುವುದಿಲ್ಲ. |
| 12 | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಮಳೆ ಹಾನಿಯಿಂದ ಆಗಿರುವ ನಷ್ಟಕ್ಕೆ ಪರಿಹಾರ ಕೋರಿ. | ದ.ಕ. ಜಿಲ್ಲಾಧಿಕಾರಿಯವರ ಪತ್ರ. ಸಂ.ಪ್ರ೯/ಉನಿಕ/ದ ಕಜಿ/ಮಂ/ಸಿಆರ್ 57/ 2022-23 ದಿನಾಂಕ 16-08-2022 | ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಬೆಂಗಳೂರು | 20.00 | ಪ್ರವಾಸೋದ್ಯಮ ಇಲಾಖೆಯಿಂದ ಅನುದಾನ ಕೋರಲಾಗಿದೆ. |

<u>ನಿರ್ಣಯ:</u> ಮೇಲ್ಕಾಣಿಸಿದ ಪ್ರಸ್ತಾವನೆಗಳ ಬಗ್ಗೆ ಸರಕಾರಕ್ಕೆ ಹಾಗೂ ಸಂಬಂಧಿತ ಪ್ರಾಧಿಕಾರದಿಂದ ನೆನಪೋಲೆಯನ್ನು ಬರೆದು ಮಾನ್ಯ ಶಾಸಕರ ಮೂಲಕ ಸರಕಾರದಿಂದ ಅನುದಾನ ಮಂಜೂರಾತಿಗೆ ಪ್ರಯತ್ನಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 22 : ವಾರ್ಷಿಕ ಆಡಳಿತ ವರದಿಗಳ ಅನುಮೋದನೆ.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018 ರ ಕಲಂ 10(2) (xiii) ರಂತೆ ವಾರ್ಷಿಕ ಆಡಳಿತ ವರದಿಯನ್ನು ಪ್ರಾಧಿಕಾರವು ಅನುಮೋದಿಸಬೇಕಾಗಿದೆ. 2018–19, 2019–20 ಮತ್ತು 2020–21 ನೇ ಸಾಲಿನ ಹಿಂದಿನ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದ ವಾರ್ಷಿಕ ಆಡಳಿತ ವರದಿಗಳನ್ನು ಅನುಮೋದನೆಗೆ ಒಪ್ಪಿಸಿದೆ.

ನಿರ್ಣಯ: **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2018–19, 2019–20 ಮತ್ತು 2020–21 ನೇ ಸಾಲಿನ ಹಿಂದಿನ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದ ವಾರ್ಷಿಕ ಆಡಳಿತ ವರದಿಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.**

ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು :

ವಿಷಯ ಸಂಖ್ಯೆ 23 : ಪ್ರಾಧಿಕಾರದ ಸಭೆಗೆ ಪದನಿಮಿತ್ತ ಸದಸ್ಯರ ಪರವಾಗಿ ಹಾಜರಾತಿ ಕುರಿತು.

ನಿರ್ಣಯ: **ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018 ರ ಕಲಂ 3 ರನ್ವಯ ಪ್ರಾಧಿಕಾರದಲ್ಲಿ ಪದನಿಮಿತ್ತ ನೆಲೆಯಲ್ಲಿ ಸದಸ್ಯರಾಗಿರುವ ಸದಸ್ಯರು ಅಪೇಕ್ಷಿಸಿದಲ್ಲಿ ಅವರುಗಳ ಬದಲಿಯಾಗಿ ಪ್ರಾಧಿಕಾರದ ಸಭೆಗೆ ಹಾಜರಾಗುವ ಅಧಿಕಾರಿಗಳ ವಿವರಗಳನ್ನು ನೀಡಲು ಪತ್ರ ಬರೆಯಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ 24 : ಸಭೆಯ ಕಾರ್ಯಸೂಚಿಗಳನ್ನು ಸದಸ್ಯರಿಗೆ ಕಳುಹಿಸುವ ಕುರಿತು.

ನಿರ್ಣಯ: **ಕಾರ್ಯಸೂಚಿಗಳನ್ನು ಸಭೆಯ ದಿನಾಂಕದಿಂದ ಕನಿಷ್ಠ 7 ದಿವಸಗಳ ಮುಂಚಿತವಾಗಿ ಸದಸ್ಯರಿಗೆ ಕಳುಹಿಸಲು ನಿರ್ದೇಶಿಸಲಾಯಿತು.**

ವಿಷಯ ಸಂಖ್ಯೆ 25 : ಸಭೆಯ ನಡವಳಿಗಳನ್ನು ಸದಸ್ಯರಿಗೆ ಕಳುಹಿಸುವ ಕುರಿತು.

ನಿರ್ಣಯ: **ಸಭೆಯ ನಡವಳಿಗಳನ್ನು ಸಭೆ ನಡೆದ ಒಂದು ವಾರದೊಳಗೆ ಸಂಬಂಧಿಸಿದ ಎಲ್ಲರಿಗೂ ಕಳುಹಿಸಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ 26 : ಪ್ರಾಧಿಕಾರದ ಆರ್ಥಿಕ ಸ್ಥಿತಿಗತಿಗಳ ವ್ಯವಹರಣೆಗಳನ್ನು ಕಾಲಕಾಲಕ್ಕೆ ಪರಿಶೀಲಿಸುವ ಕುರಿತು.

ನಿರ್ಣಯ: **ಪ್ರಾಧಿಕಾರದ ಆರ್ಥಿಕ ಸ್ಥಿತಿಗಳು ವ್ಯವಹರಣೆಗಳನ್ನು ಕಾಲಕಾಲಕ್ಕೆ ಪರಿಶೀಲಿಸಲು ಪ್ರಾಧಿಕಾರದ ಲೆಕ್ಕ ಪತ್ರಗಳ ಅಧಿಕಾರಿ, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಪತ್ರಗಳ ಅಧಿಕಾರಿಯನ್ನೊಳಗೊಂಡ ಉಪಸಮಿತಿಯನ್ನು ರಚಿಸಿಕೊಂಡು ಕಾಲಕಾಲಕ್ಕೆ ಲೆಕ್ಕಪತ್ರಗಳ ಪರಿಶೀಲನೆ ನಡೆಸಿ ವರದಿಯನ್ನು ಮುಂದಿನ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಲು ಕ್ರಮ ಜರಗಿಸಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ 27 : ಪ್ರಾಧಿಕಾರ ಸಭೆಯ ನಡವಳಿಗಳ ದಾಖಲೀಕರಣದ ಕುರಿತು.

ನಿರ್ಣಯ: **ಮುಂಬರುವ ಪ್ರಾಧಿಕಾರ ಸಭೆಯ ನಡವಳಿಗಳ ದಾಖಲೀಕರಣಕ್ಕೆ ವೀಡಿಯೋ ರೆಕಾರ್ಡಿಂಗ್ (Video Recording) ಬಗ್ಗೆ ಅಗತ್ಯ ಕ್ರಮ ಜರಗಿಸಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ 28 : ಜೈವಿಕ ಉದ್ಯಾನದಲ್ಲಿರುವ ಪ್ರಾಣಿ, ಪಕ್ಷಿ, ಉರಗಗಳ ಗಣತಿ ಕುರಿತು.

ನಿರ್ಣಯ: ಜೈವಿಕ ಉದ್ಯಾನದಲ್ಲಿರುವ ಪ್ರಾಣಿ, ಪಕ್ಷಿ, ಉರಗಗಳ ದಾಸ್ತಾನು, ಹುಟ್ಟು, ಸಾವುಗಳನ್ನು ಕಾಲಕಾಲಕ್ಕೆ ಕಾಲೋಚಿತಗೊಳಿಸಿ ದಾಸ್ತಾನು ವಹಿಯಲ್ಲಿ ಇಂದೀಕರಿಸಿ ಮುಂಬರುವ ಪ್ರತಿ ಪ್ರಾಧಿಕಾರದ ಸಭೆಗಳಲ್ಲಿ ಪಿ.ಪಿ.ಟಿ. ಮೂಲಕ ನಿರ್ದೇಶಕರು ಮಾಹಿತಿ ನೀಡುವುದು ಮತ್ತು ಜೈವಿಕ ಉದ್ಯಾನಕ್ಕೆ ಸಂದರ್ಶಿಸಿದ ಸಂದರ್ಶಕರ ಬಗ್ಗೆಯೂ ಮಾಹಿತಿ ನೀಡುವುದು.

ವಿಷಯ ಸಂಖ್ಯೆ 29 : ಜೈವಿಕ ಉದ್ಯಾನದ ಪ್ರಾಣಿಗಳಿಗೆ ನೀಡುವ ಆಹಾರ ಸಾಮಾಗ್ರಿಗಳ ಹಂಚಿಕೆ ಕುರಿತು.

ನಿರ್ಣಯ: ಪ್ರಾಣಿಗಳಿಗೆ ನೀಡುವ ಆಹಾರ ಸಾಮಾಗ್ರಿಗಳ ಹಂಚಿಕೆ ಕುರಿತು ನಿರ್ದೇಶಕರು, ಜೈವಿಕ ಉದ್ಯಾನ ಇವರು ಆಗಾಗ ಪರಿಶೀಲನೆ ನಡೆಸಿ ಪಾಲನಾ ವರದಿಯನ್ನು ಪ್ರಾಧಿಕಾರದ ಪ್ರತಿ ಸಭೆಗೆ ಸಲ್ಲಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 30 : ಪ್ರಾಧಿಕಾರಕ್ಕೆ ಬರುವ ದೂರು ಅರ್ಜಿಗಳ ಕುರಿತು.

ನಿರ್ಣಯ: ಪ್ರಾಧಿಕಾರಕ್ಕೆ ಬರುವ ದೂರು ಅರ್ಜಿಗಳಿಗೆ ಸಂಬಂಧಿಸಿ ಪೂರಕ ದಾಖಲೆ ಮತ್ತು ಅರ್ಜಿದಾರರ ಪೂರ್ಣ ವಿಳಾಸ ಹೊಂದಿರುವ ಎಲ್ಲಾ ದೂರು ಅರ್ಜಿಗಳ ಬಗ್ಗೆ ಸೂಕ್ತ ತನಿಖೆ ಮಾಡಬೇಕು. ತನಿಖೆ ವೇಳೆ ತಪ್ಪಿತಸ್ಥರೆಂದು ಕಂಡುಬರುವವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ/ಕ್ರಿಮಿನಲ್ ನಡವಳಿಗಳನ್ನು ನಡೆಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 31 : ಪ್ರಾಧಿಕಾರದಲ್ಲಿ ಗುತ್ತಿಗೆ ನಡೆಸುವ ಗುತ್ತಿಗೆದಾರರ ವಿವರಗಳನ್ನು ಪಡೆಯುವ ಕುರಿತು.

ನಿರ್ಣಯ: ಪ್ರಾಧಿಕಾರದಲ್ಲಿ ಅತೀ ಹೆಚ್ಚಿನ ಸಮಯದಿಂದ ಗುತ್ತಿಗೆ ನಡೆಸುವ ಗುತ್ತಿಗೆದಾರರ ವಿವರಗಳನ್ನು ಪಡೆದು ಪರಿಶೀಲನೆ ಮಾಡಿ ಇಂಜಿನಿಯರಿಂಗ್ ವಿಭಾಗವು ಮುಂದಿನ ಸಭೆಯಲ್ಲಿ ವರದಿ ಮಂಡಿಸಲು ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ 32 : ಪಿಲಿಕುಳದ ಗುತ್ತುಮನೆಯಲ್ಲಿ ಚಲನಚಿತ್ರ ಚಿತ್ರೀಕರಣ ನಡೆಸಲು ಶುಲ್ಕ ಪಡೆಯುವ ಕುರಿತು.

ನಿರ್ಣಯ: ಪಿಲಿಕುಳದ ಗುತ್ತುಮನೆಯಲ್ಲಿ ಚಲನಚಿತ್ರ ಚಿತ್ರೀಕರಣಕ್ಕೆ ಸಂಬಂಧಿಸಿ ತುಳು ಚಿತ್ರೀಕರಣಕ್ಕೆ ದಿನಕ್ಕೆ ರೂ. 50,000/- ಕನ್ನಡ ಚಿತ್ರೀಕರಣಕ್ಕೆ ದಿನಕ್ಕೆ ರೂ. 1,00,000/- ಇತರೆ ಭಾಷಾ ಚಿತ್ರೀಕರಣಕ್ಕೆ ಚಾಲ್ತಿಯಲ್ಲಿ ಇರುವ ಶುಲ್ಕವನ್ನು ನಿಗದಿಪಡಿಸಲು ಮಾನ್ಯ ಜಿಲ್ಲಾಧಿಕಾರಿಯವರು ಮಂಜೂರಾತಿ ನೀಡಿರುವುದನ್ನು ಸಭೆಯು ಅನುಮೋದಿಸಿತು.

*ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.*

| | |
|---|---|
| ಆಯುಕ್ತರು | ಅಧ್ಯಕ್ಷರು |
| ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ |
| ಮಂಗಳೂರು | ಮಂಗಳೂರು |

******